# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 890 |
| ಮಾನ್ಯ ವಿಧಾನ ಪರಿಷತ್ತಿನ ಸದಸ್ಯರ ಹೆಸರು | : | ಡಾ:ತಳವಾರ್ ಸಾಬಣ್ಣ |
| ಉತ್ತರಿಸಬೇಕಾದ ದಿನಾಂಕ | : | 23.02.2024 |
| ಉತ್ತರಿಸುವ ಸಚಿವರು | : | ಸಮಾಜ ಕಲ್ಯಾಣ ಸಚಿವರು |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ವಿದ್ಯಾರ್ಥಿಗಳಿಗಾಗಿ ಇರುವ ವಸತಿ ಶಾಲೆಗಳು ಮೂಲಭೂತ ಸೌಲಭ್ಯಗಳ ಕೊರತೆ ಎದುರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ವಿವರ ನೀಡುವುದು). | ಬಂದಿದೆ.<br>ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದಲ್ಲಿ ರಾಜ್ಯದಾದ್ಯಂತ ಒಟ್ಟು 833 ವಸತಿ ಶಾಲೆ/ಕಾಲೇಜುಗಳು ಕಾರ್ಯನಿರ್ವಹಿಸುತ್ತಿದ್ದು, ಸದರಿ ವಸತಿ ಶಾಲೆ/ಕಾಲೇಜುಗಳಲ್ಲಿ ಗ್ರಾಮೀಣ ಭಾಗದ ಪ್ರತಿಭಾನ್ವಿತ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗ ಮತ್ತು ಹಿಂದುಳಿದ ವರ್ಗಗಳ 2,16,090 ವಿದ್ಯಾರ್ಥಿಗಳು ವ್ಯಾಸಂಗ ಮಾಡಲು ಅವಕಾಶ ಕಲ್ಪಿಸಲಾಗಿರುತ್ತದೆ. |
| ಆ) | ವಸತಿ ಶಾಲೆಗಳಲ್ಲಿ ಅಧ್ಯಯನ ಮಾಡುತ್ತಿರುವ ಗ್ರಾಮೀಣ ಭಾಗದ ತೀರಾ ಹಿಂದುಳಿದ ಬಡ ಕುಟುಂಬಗಳ ಮಕ್ಕಳು ಅಭ್ಯಾಸ ಮಾಡಲು ಪೂರಕ ವಾತಾವರಣದ ಕೊರತೆಯಿಂದ ತೀವ್ರತರವಾದ ಕಷ್ಟ ಅನುಭವಿಸುವಂತಾಗಿದ್ದು ಇದಕ್ಕೆ ಸರ್ಕಾರ ಕೈಗೊಂಡ ಕ್ರಮಗಳೇನು; | ಸದರಿ ವಿದ್ಯಾರ್ಥಿಗಳಿಗೆ ಉಚಿತ ವಸತಿ, ಆಹಾರ ವ್ಯವಸ್ಥೆ ಹಾಗೂ ಗುಣಮಟ್ಟದ ಶಿಕ್ಷಣದೊಂದಿಗೆ ವಿದ್ಯಾರ್ಥಿಗಳ ಶೈಕ್ಷಣಿಕ ಅಭಿವೃದ್ಧಿಗಾಗಿ ಅಗತ್ಯ ಮೂಲಭೂತ ಸೌಕರ್ಯಗಳಾದ ಸಿದ್ಧಪಡಿಸಿದ ಸಮವಸ್ತ್ರ, ನೋಟ್ ಪುಸ್ತಕ, ಲೇಖನ ಸಾಮಗ್ರಿ, ಶೂ, ಸಾಕ್ಸ್, ಟೈ, ಬೆಲ್ಟ್, ಶುಚಿಸಂಭ್ರಮ ಕಿಟ್, ಪಠ್ಯ ಪುಸ್ತಕ ಹಾಗೂ ಇತರೆ ಸಾಮಗ್ರಿಗಳನ್ನು ಒದಗಿಸಲಾಗುತ್ತಿದೆ.<br>ಸ್ವಂತ ಕಟ್ಟಡ ಹೊಂದಿರುವ ಭಾಗಶಃ ವಸತಿ ಶಾಲೆ/ಕಾಲೇಜುಗಳಿಗೆ ಪೀಠೋಪಕರಣ ಸಾಮಗ್ರಿಗಳಾದ ಡೆಸ್ಕ್ ಕಂ ಬೆಂಚ್, ಟು ಟಯರ್ ಕಾಟ್, ಡೈನಿಂಗ್ ಟೇಬಲ್, ಆಫೀಸ್ ಟೇಬಲ್, ಎಸ್ ಟೈಪ್ ಚೇರ್, ಅಲ್ಮೆರಾ ರ್‍ಯಾಕ್ಸ್, ಹಾಸಿಗೆ, ದಿಂಬು, ಬೆಡ್‌ಶೀಟ್, ಬೆಡ್‌ಸ್ಪ್ರೆಡ್ ಗಳನ್ನು ಒದಗಿಸಲಾಗಿರುತ್ತದೆ. ಉಳಿದ ವಸತಿ ಶಾಲೆ/ಕಾಲೇಜುಗಳಿಗೆ ಅನುದಾನ ಲಭ್ಯತೆಯ ಆಧಾರದ ಮೇರೆಗೆ ಹಂತ ಹಂತವಾಗಿ ಒದಗಿಸಲಾಗುವುದು.<br>2024-25ನೇ ಸಾಲಿನ ಆಯವ್ಯಯದಲ್ಲಿ ವಸತಿ ಶಾಲೆ/ಕಾಲೇಜುಗಳಿಗೆ ಅತ್ಯಗತ್ಯ ಮೂಲಭೂತ ಸೌಕರ್ಯಗಳಾದ ಡೆಸ್ಕ್ ಕಮ್ ಬೆಂಚ್, ಟು ಟೈರ್ ಕಾಟ್, ಹಾಸಿಗೆಗಳು, ದಿಂಬುಗಳು, ಬೆಡ್‌ಸ್ಪ್ರೆಡ್ ಮತ್ತು ಬೆಡ್‌ಶೀಟ್, ಡೈನಿಂಗ್ ಟೇಬಲ್, ತಟ್ಟೆ-ಲೋಟಗಳು, ಪಾತ್ರೆ ಪರಿಕರಗಳು (ಸೆಟ್‌ಗಳಲ್ಲಿ) , ವಾಟರ್ ಪ್ಯೂರಿಫೈಯರ್, ಆಫೀಸ್ ಟೇಬಲ್, ಎಸ್-ಟೈಪ್ ಛೇರ್, ಸೋಲಾರ್ ವಾಟರ್ ಹೀಟರ್ (500 ಲೀ. ಕೆಪಾಸಿಟಿ), ಕಂಪ್ಯೂಟರ್, ಕಂಪ್ಯೂಟರ್ ಟೇಬಲ್, ಕಂಪ್ಯೂಟರ್ ಛೇರ್, ಪಾಠೋಪಕರಣಗಳು ಮತ್ತು ಶಾಲಾ ಬ್ಯಾಗ್ ಗಳನ್ನು ರೂ.485.87 ಕೋಟಿಗಳ ವೆಚ್ಚದಲ್ಲಿ ಹಾಗೂ ಬಾಕಿ ಉಳಿದ ಅವಶ್ಯ ಮೂಲಭೂತ ಸೌಕರ್ಯಗಳಾದ ಕ್ರೀಡಾ |

| | | |
|---|---|---|
| | | ಸಾಮಗ್ರಿಗಳು, ಸಂಗೀತ ಉಪಕರಣಗಳು, ಟ್ರಂಕ್, ಫ್ರೀಜರ್, ನರ್ಸಿಂಗ್ ಕಿಟ್(ಸೆಟ್‌ಗಳಲ್ಲಿ), ಸಿ.ಸಿ.ಟಿ.ವಿ.(1 ಸೆಟ್), ಅಲ್ಮೇರಾ ರ್ಯಾಕ್ಸ್, ಟಿ.ವಿ, ಬಕೆಟ್ ಮತ್ತು ಜಗ್ಗು, ಡಸ್ಟ್ ಬಿನ್, ಗ್ರೀನ್ ಮತ್ತು ವೈಟ್ ಬೋರ್ಡ್, ಫ್ಲೋರ್ ಕ್ಲೀನಿಂಗ್ ಮಿಷನ್ ಹಾಗೂ ಸ್ಯಾನಿಟೈಸ್‌ಗೆ ಸಂಬಂಧಿಸಿದ ಉಪಕರಣ ಮತ್ತು ಜಮಖಾನ (ದೊಡ್ಡದು) ಗಳನ್ನು ರೂ.127.99 ಕೋಟಿಗಳ ವೆಚ್ಚದಲ್ಲಿ, ಒಟ್ಟಾರೆ ಮೂಲಭೂತ ಸಾಮಗ್ರಿಗಳಿಗೆ ರೂ.613.86 ಕೋಟಿಗಳ ಅವಶ್ಯಕತೆ ಇರುತ್ತದೆ. 2024-25ನೇ ಸಾಲಿನ ಆಯವ್ಯಯದಲ್ಲಿ ಅನುದಾನದ ಲಭ್ಯತೆಯ ಆಧಾರದ ಮೇಲೆ ಹಂತ ಹಂತವಾಗಿ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಕ್ರಮವಹಿಸಲಾಗುವುದು. |
| **ಇ)** | ವಿಧಾನ ಮಂಡಲದ ಅನುಸೂಚಿತ ಜಾತಿ/ಪಂಗಡಗಳ ಕಲ್ಯಾಣ ಸಮಿತಿ, ವಸತಿ ಶಾಲೆ ಮತ್ತು ಹಾಸ್ಟೆಲ್‌ಗಳ ಕುರಿತು ಇತ್ತೀಚೆಗೆ ಸರ್ಕಾರಕ್ಕೆ ಸಲ್ಲಿಸಿರುವ ವರದಿಯಾನುಸಾರ ಕ್ರಮ ಕೈಗೊಳ್ಳಲಾಗಿದೆಯೇ: (ವರದಿಯ ಪ್ರತಿಯನ್ನು ನೀಡುವುದು) | ವಿಧಾನ ಮಂಡಲದ ಅನುಸೂಚಿತ ಜಾತಿ/ಪಂಗಡಗಳ ಕಲ್ಯಾಣ ಸಮಿತಿ, ವಸತಿ ಶಾಲೆ ಮತ್ತು ಹಾಸ್ಟೆಲ್‌ಗಳ ಕುರಿತು ಇತ್ತೀಚೆಗೆ ಸಲ್ಲಿಸಿರುವ ವರದಿಯಾನುಸಾರ ಕೈಗೊಂಡ ಕ್ರಮಗಳ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ. |
| **ಈ)** | ಬಾಡಿಗೆ ಕಟ್ಟಡಗಳಲ್ಲಿ ನಡೆಯುತ್ತಿರುವ ವಸತಿ ಶಾಲೆಗಳಿಗೆ ಮೂಲಭೂತ ಸೌಕರ್ಯ ಒದಗಿಸಲು ಸರ್ಕಾರ ಕೈಗೊಂಡಿರುವ ಪರಿಹಾರ ಕ್ರಮಗಳೇನು? | ಬಾಡಿಗೆ ಕಟ್ಟಡಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ವಸತಿ ಶಾಲಾ/ಕಾಲೇಜುಗಳಿಗೆ ನಿವೇಶನ ಗುರುತಿಸಿದ್ದು, ಸದರಿ ವಸತಿ ಶಾಲಾ/ಕಾಲೇಜುಗಳಿಗೆ ಸ್ವಂತ ಕಟ್ಟಡ ನಿರ್ಮಾಣ ಮಾಡಲು ಆರ್ಥಿಕ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಿದ್ದು, ಆರ್ಥಿಕ ಇಲಾಖೆಯು ಹೊಸ ಕಾಮಗಾರಿಗಳ ಪ್ರಸ್ತಾವನೆಯನ್ನು ಒಪ್ಪಲು ಸಾಧ್ಯವಿಲ್ಲವೆಂದು ತಿಳಿಸಿರುತ್ತದೆ.<br>ಸದರಿ ವಸತಿ ಶಾಲೆ/ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಅಗತ್ಯ ಮೂಲಭೂತ ಸೌಕರ್ಯಗಳಾದ ಸಿದ್ಧಪಡಿಸಿದ ಸಮವಸ್ತ್ರ, ನೋಟ್ ಪುಸ್ತಕ, ಲೇಖನ ಸಾಮಗ್ರಿ, ಶೂ, ಸಾಕ್ಸ್, ಟೈ, ಬೆಲ್ಟ್, ಶುಚಿ ಸಂಭ್ರಮ ಕಿಟ್, ಪಠ್ಯ ಪುಸ್ತಕ, ಹಾಗೂ ಇತರೆ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗುತ್ತಿದೆ. |

ಸಕಇ 72 ಎಂಡಿಎಸ್ 2024

(ಡಾ||ಹೆಚ್.ಸಿ. ಮಹದೇವಪ್ಪ )
ಸಮಾಜ ಕಲ್ಯಾಣ ಸಚಿವರು

## ಕರ್ನಾಟಕ ವಿಧಾನಸಭೆ





# ಕರ್ನಾಟಕ ವಿಧಾನಮಂಡಲದ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿ 2023-24 ನೇ ಸಾಲಿನ

## ಹದಿನಾರನೇ ವಿಧಾನಸಭೆ
## ಮೊದಲನೇ ಹಾಗೂ ಮಧ್ಯಂತರ ವರದಿ

**ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿಯು ಸಮಾಜ ಕಲ್ಯಾಣ ಇಲಾಖೆ, ಆರ್ಥಿಕ ಇಲಾಖೆ, ಶಿಕ್ಷಣ (ಉನ್ನತ) ಇಲಾಖೆ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಇಂಧನ ಇಲಾಖೆ ಮತ್ತು ಯೋಜನೆ, ಕಾರ್ಯಕ್ರಮ ಹಾಗೂ ಸಾಂಖ್ಯಿಕ ಇಲಾಖೆಗಳಿಗೆ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ಸಮುದಾಯಗಳಿಗೆ ಒದಗಿಸಿರುವ ಎಸ್‌ಸಿಎಸ್‌ಪಿ/ಟಿಎಸ್‌ಪಿ ಅನುದಾನ ಮತ್ತು ನೇಮಕಾತಿ ಕುರಿತು ಚರ್ಚಿಸಿ ಸರ್ಕಾರ ತುರ್ತಾಗಿ ಕೈಗೊಳ್ಳಬೇಕಾದ ಮಧ್ಯಂತರ ವರದಿ**

---

ವಿಧಾನಸಭೆಯಲ್ಲಿ ಮಂಡಿಸಿದ ದಿನಾಂಕ:

06 DEC 2023

ವಿಧಾನ ಪರಿಷತ್ತಿನಲ್ಲಿ ಮಂಡಿಸಿದ ದಿನಾಂಕ:

ಕರ್ನಾಟಕ ವಿಧಾನಸಭೆ ಸಚಿವಾಲಯ, ವಿಧಾನ ಸೌಧ, ಬೆಂಗಳೂರು

# 1. ಸಮಾಜ ಕಲ್ಯಾಣ ಇಲಾಖೆ

16ನೇ ವಿಧಾನಸಭೆಯ 2023-24ನೇ ಸಾಲಿನ ಕರ್ನಾಟಕ ವಿಧಾನಮಂಡಲದ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿಯು ದಿನಾಂಕ: 01.09.2023, 08.09.2023, 14.09.2023, 21.09.2023 ಹಾಗೂ 12.10.2023ರಂದು ಸಭೆ ಸೇರಿ, ಸಮಾಜ ಕಲ್ಯಾಣ ಇಲಾಖೆ ಹಾಗೂ ಇಲಾಖೆಯ ಅಧೀನದಲ್ಲಿ ಬರುವ ಈ ಕೆಳಕಂಡ ಇಲಾಖೆ/ನಿಗಮ/ಮಂಡಳಿ/ಸಂಸ್ಥೆ/ಸಂಘ/ಆಯೋಗ/ನಿರ್ದೇಶನಾಲಯಗಳಲ್ಲಿ ಅನುಸೂಚಿತ ಜಾತಿಗಳ ಉಪ ಹಂಚಿಕೆ ಮತ್ತು ಬುಡಕಟ್ಟು ಉಪ ಹಂಚಿಕೆಗಳನ್ನೊಳಗೊಂಡಂತೆ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡದವರ ಅಭಿವೃದ್ಧಿಗಾಗಿ ಹಮ್ಮಿಕೊಂಡಿರುವ ಕಲ್ಯಾಣ ಕಾರ್ಯಕ್ರಮಗಳು/ಯೋಜನೆಗಳ ಅನುಷ್ಠಾನಕ್ಕಾಗಿ ಮಂಜೂರು/ಬಿಡುಗಡೆ/ಖರ್ಚಾಗಿರುವ/ಬಾಕಿ ಉಳಿದಿರುವ ಅನುದಾನ ಹಾಗೂ ನೇಮಕಾತಿ/ಮುಂಬಡ್ತಿಯಲ್ಲಿ ಮೀಸಲಾತಿ ಮತ್ತು ಬ್ಯಾಕ್‌ಲಾಗ್ ಭರ್ತಿ ಮಾಡಿರುವ ಸಂಬಂಧ ಇಲಾಖಾಧಿಕಾರಿಗಳೊಂದಿಗೆ ಚರ್ಚಿಸಿತು.

ಇಲಾಖೆಯ ವಿವರಗಳು:

ಆಯುಕ್ತಾಲಯ/ನಿಗಮ/ಮಂಡಳಿ/ಸಂಸ್ಥೆ/ಸಂಘ/ಆಯೋಗ/ನಿರ್ದೇಶನಾಲಯಗಳು.

- ಸಮಾಜ ಕಲ್ಯಾಣ ಇಲಾಖೆಯ ಆಯುಕ್ತಾಲಯ
- ಪರಿಶಿಷ್ಟ ಪಂಗಡಗಳ ನಿರ್ದೇಶನಾಲಯ
- ಡಾ: ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ
- ಕರ್ನಾಟಕ ಆದಿಜಾಂಬವ ಅಭಿವೃದ್ಧಿ ನಿಗಮ
- ಕರ್ನಾಟಕ ಭೋವಿ ಅಭಿವೃದ್ಧಿ ನಿಗಮ
- ಕರ್ನಾಟಕ ತಾಂಡ ಅಭಿವೃದ್ಧಿ ನಿಗಮ
- ಕರ್ನಾಟಕ ಸಫಾಯಿ ಕರ್ಮಚಾರಿಗಳ ಅಭಿವೃದ್ಧಿ ನಿಗಮ
- ಡಾ: ಬಾಬು ಜಗಜೀವನರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮ
- ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಲೆಮಾರಿ ಅಭಿವೃದ್ಧಿ ನಿಗಮ
- ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ(ಕ್ರೈಸ್)
- ನಾಗರೀಕ ಹಕ್ಕು ಜಾರಿ ನಿರ್ದೇಶನಾಲಯ
- ಡಾ: ಬಿ.ಆರ್. ಅಂಬೇಡ್ಕರ್ ಸಂಶೋಧನಾ ಸಂಸ್ಥೆ
- ಡಾ: ಬಾಬು ಜಗಜೀವನರಾಂ ಸಂಶೋಧನಾ ಸಂಸ್ಥೆ.
- ಕರ್ನಾಟಕ ರಾಜ್ಯ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ ಆಯೋಗ
- ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗ
- ಕೇಂದ್ರ ಪರಿಹಾರ ಸಮಿತಿ/ ನಿರಾಶ್ರಿತರ ಪರಿಹಾರ ಕೇಂದ್ರ

ಅನುದಾನದ ವಿವರಗಳು :

| ವರ್ಷ | ಮಂಜೂರಾದ ಅನುದಾನ | ಬಿಡುಗಡೆಯಾದ ಅನುದಾನ | ವೆಚ್ಚವಾಗದೇ ಬಾಕಿ ಉಳಿದ ಅನುದಾನ |
|---|---|---|---|
| **2020-21** | **3349.58** | 3276.08 | 75.21 |
| 2021-22 | 4059.85 | 4057.10 | 11.75 |
| 2022-23 | 5133.01 | 4956.33 | 14.51 |

**ರಾಜ್ಯದಲ್ಲಿರುವ ಇಲಾಖೆಯಡಿ ಬರುವ ವಿದ್ಯಾರ್ಥಿನಿಲಯಗಳು/ವಸತಿ ಶಾಲೆಗಳು :**

- ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳು – 1,236
- ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳು – 673
- ಪರಿಶಿಷ್ಟ ಜಾತಿಯ ವಸತಿ ಶಾಲೆಗಳು – 503
- ಪರಿಶಿಷ್ಟ ಪಂಗಡದ ವಸತಿ ಶಾಲೆಗಳು – 156

**ವಿದ್ಯಾರ್ಥಿ ನಿಲಯಗಳಲ್ಲಿ ಹಾಗೂ ವಸತಿ ಶಾಲೆಗಳಲ್ಲಿ ಒದಗಿಸಲಾಗುತ್ತಿರುವ ಸೌಲಭ್ಯಗಳು :**

- ಭೋಜನಾ ವೆಚ್ಚ
- ಸಮವಸ್ತ್ರ
- ಪಠ್ಯಪುಸ್ತಕ ಹಾಗೂ ನೋಟ್‌ಬುಕ್ಸ್
- ಸ್ಕೂಲ್‌ಬ್ಯಾಗ್
- ಶುಚಿ ಸಂಭ್ರಮ ಕಿಟ್
- ಉಚಿತ ಶಿಕ್ಷಣದ ಜೊತೆಗೆ ಇತರೆ ಸೌಲಭ್ಯಗಳು.

ವಾರ್ಷಿಕ ಆದಾಯ ಎರಡೂವರೆ ಲಕ್ಷಕ್ಕಿಂತ ಕಡಿಮೆ ಇರುವ ಮಕ್ಕಳು ಆನ್‌ಲೈನ್ ಮುಖಾಂತರ ಅರ್ಜಿ ಸಲ್ಲಿಸಿ, ಪ್ರವೇಶ ಪಡೆಯಬಹುದಾಗಿರುತ್ತದೆ.

ಅಲ್ಲದೇ, ಆಯುಕ್ತಾಲಯ ಗುರುತಿಸಿರುವ ರಾಜ್ಯದ ಪ್ರತಿಷ್ಠಿತ ಶಾಲೆಗಳಲ್ಲಿ ಪ್ರತಿ ವರ್ಷ ಈ ಸಮುದಾಯಗಳ 1000 ಪ್ರತಿಭಾವಂತ ವಿದ್ಯಾರ್ಥಿಗಳನ್ನು ಗುರುತಿಸಿ ರಾಜ್ಯದ ಪ್ರತಿಷ್ಠಿತ ಶಾಲೆಗಳಲ್ಲಿ 6ನೇ ತರಗತಿಗೆ ಇಲಾಖೆಯಿಂದ ಪಾವತಿಸಿ ಪ್ರವೇಶಾತಿ ಮಾಡಿಸಲಾಗುತ್ತಿದೆ ಮತ್ತು 10ನೇ ತರಗತಿಯವರೆಗೆ ಮುಂದುವರೆಸಿ ಶುಲ್ಕವನ್ನು ಶಾಲೆಗಳಿಗೆ ನೇರವಾಗಿ ಪಾವತಿಸಲಾಗುತ್ತಿದೆ.

○ ಜಿಲ್ಲಾ ಮಟ್ಟದಲ್ಲಿ ಗರಿಷ್ಠ - 1,00,000/-

○ ತಾಲ್ಲೂಕು ಮಟ್ಟದಲ್ಲಿ ಗರಿಷ್ಠ - 50,000/-

ವಾರ್ಷಿಕ ಆದಾಯ 6,00,000/-ಗಳಿರುವ ಮೆಟ್ರಿಕ್ ಪೂರ್ವ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನವನ್ನು ಸಂಪೂರ್ಣವಾಗಿ ರಾಜ್ಯ ಸರ್ಕಾರದಿಂದ ಈ ಕೆಳಕಂಡಂತೆ ನೀಡಲಾಗುತ್ತಿದೆ.

- 1 ರಿಂದ 5ನೇ ತರಗತಿಯ ವರೆಗೆ- 1,100/-
- 6 ರಿಂದ 7ನೇ ತರಗತಿಯ ವರೆಗೆ
  - ಬಾಲಕರಿಗೆ - 1,150/-
  - ಬಾಲಕಿಯರಿಗೆ - 1,250/-
- 8ನೇ ತರಗತಿ
  - ಬಾಲಕರಿಗೆ - 1,250/-
  - ಬಾಲಕಿಯರಿಗೆ - 1,350/-

ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು ಶೇ.60:40 ಅನುಪಾತದಲ್ಲಿ ನೀಡಲಾಗುತ್ತಿರುವ ವಾರ್ಷಿಕ ಆದಾಯ ಮಿತಿ 2,50,000/- ಇರುವ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನವಾಗಿ ಡೆ ಸ್ಕಾಲರ್ ವಾರ್ಷಿಕವಾಗಿ 3,500/- ಕೊಡಲಾಗುತ್ತಿದ್ದು, ಡಿಬಿಟಿ ಮುಖಾಂತರ ಅನುದಾನವನ್ನು ನೇರವಾಗಿ ಅವರ ಖಾತೆಗಳಿಗೆ ವರ್ಗಾಯಿಸಲಾಗುತ್ತಿದೆ.

ಇಂಜಿನಿಯರಿಂಗ್ ಮತ್ತು ಮೆಡಿಕಲ್ ಓದುವ ವಿದ್ಯಾರ್ಥಿಗಳಿಗೆ ಶುಲ್ಕ ಮರುಪಾವತಿ ಮಾಡಲು ವಿದ್ಯಾರ್ಥಿಗಳಿಗೆ ವಾರ್ಷಿಕ 10 ಲಕ್ಷ ಆದಾಯ ಮಿತಿ ಇದ್ದು, ಅದನ್ನು ರಾಜ್ಯ ಸರ್ಕಾರದಿಂದ ಸಂಪೂರ್ಣವಾಗಿ ನೀಡಲಾಗುತ್ತಿದೆ. ಆದರೆ ಕೇಂದ್ರ ಸರ್ಕಾರ ನಿರ್ದೇಶನ ಇರುವುದು 2,50,000/- ಆದಾಯ ಮಿತಿಯಿದೆ ಎಂದು ಇಲಾಖಾಧಿಕಾರಿಗಳು ಸಮಿತಿಗೆ ವಿವರಿಸಿದರು.

ಇಲಾಖಾಧಿಕಾರಿಗಳ ಮಾಹಿತಿಯನ್ನು ಆಲಿಸಿದ ಸಮಿತಿಯು,

- ವಸತಿ ಶಾಲೆಗಳು, ಅಲ್ಲಿರುವ ಖಾಯಂ ಶಿಕ್ಷಕರು ಮತ್ತು ಇತರೆ ಸಿಬ್ಬಂದಿ,
- ವಿದ್ಯಾರ್ಥಿ ನಿಲಯಗಳು ಮತ್ತು ಅಧಿಕಾರಿ ಸಿಬ್ಬಂದಿ, ಅದರಲ್ಲೂ ಮಹಿಳಾ ವಿದ್ಯಾರ್ಥಿ ನಿಲಯಗಳಲ್ಲಿ ಮಹಿಳಾ ವಾರ್ಡನ್‌ಗಳ ನೇಮಕಾತಿ,
- ಒದಗಿಸುತ್ತಿರುವ ಮೂಲಭೂತ ಸೌಲಭ್ಯಗಳು ಮತ್ತು ಅವುಗಳ ನಿರ್ವಹಣೆ,
- ಶಾಶ್ವತ ಮತ್ತು ತಾತ್ಕಾಲಿಕ ಹುದ್ದೆಗಳು,

- ಇಲಾಖೆಯಡಿ ನಡೆಸುತ್ತಿರುವ ವಿಶೇಷ ಶಾಲೆಗಳು ಮತ್ತು ಅಲ್ಲಿರುವ ಸಿಬ್ಬಂದಿಗಳ ವಿವರಗಳ ಕುರಿತು ಇಲಾಖಾಧಿಕಾರಿಗಳಿಂದ ಸಮಿತಿಯು ಮಾಹಿತಿ ಬಯಸಿತು.

ಇಲಾಖೆಯಲ್ಲಿ ಮಂಜೂರಾಗಿರುವ ಒಟ್ಟು ಹುದ್ದೆಗಳು 19,068. ಇದರಲ್ಲಿ ರ್ಯನಿರ್ವಹಿಸುತ್ತಿರುವುದು 6,403. ಉಳಿದಂತೆ ಅತಿಥಿ ಶಿಕ್ಷಕರು, ಉಪನ್ಯಾಸಕರು 2,283. ೂರಗುತ್ತಿಗೆಯಲ್ಲಿ 516 ಬೋಧಕರು, 7,984 ಜನ ಗ್ರೂಪ್ 'ಡಿ' ಹುದ್ದೆಗಳು ಮಂಜೂರಾಗಿದ್ದು, ೂರಗುತ್ತಿಗೆಯಿಂದ ತೆಗೆದುಕೊಳ್ಳಲು ಆರ್ಥಿಕ ಇಲಾಖೆಯು ಸೂಚಿಸಿರುತ್ತದೆ ಮತ್ತು ವಾರ್ಡನ್‌ಗಳು ಾಗೂ ಸಂಗೀತ ಶಿಕ್ಷಕರ ಹುದ್ದೆಗಳು ಮಂಜೂರಾಗಿದ್ದರೂ ಜವಾಬ್ದಾರಿಯುತ ಹುದ್ದೆಗಳಾಗಿರುವುದರಿಂದ ಮಕ ಮಾಡಿಕೊಳ್ಳಲಾಗುವುದು. ವಿಶೇಷ ಶಾಲೆಗಳಲ್ಲಿ ಶಿಕ್ಷಕರನ್ನು ಹೊರಗುತ್ತಿಗೆಯಲ್ಲಿ ಪಡೆಯದೆ, ಅತಿಥಿ ಕ್ಷಕರನ್ನು ತೆಗೆದುಕೊಳ್ಳಲಾಗುತ್ತಿದ್ದು, ರೂ. 33,000/-ಗಳನ್ನು ವೇತನವಾಗಿ ನೀಡಲಾಗುತ್ತಿದೆ. ಅಲ್ಲದೇ, ವರಿಗೆ ನೀಡಲಾಗುತ್ತಿರುವ ವೇತನವನ್ನು ಶೇ. 25%ರಷ್ಟು ಹೆಚ್ಚಿಗೆ ನೀಡಲು 7ನೇ ವೇತನ ಆಯೋಗದಲ್ಲಿ ವಗಿಸುವಂತೆ ಕೋರಲಾಗಿರುತ್ತದೆ ಹಾಗೂ ಉಳಿದಂತೆ ಆರ್ಥಿಕ ಇಲಾಖೆಯು ಸೂಚಿಸಿರುವ ುದ್ದೆಗಳಾದ ವಾಚ್‌ಮ್ಯಾನ್‌ನಂತಹ ಇತರೆ ಹುದ್ದೆಗಳನ್ನು ಹೊರಗುತ್ತಿಗೆಯಲ್ಲಿ ಅಥವಾ ಏಜೆನ್ಸಿಗಳ ೂಲಕ ಪಡೆಯಲಾಗುತ್ತಿದೆ. ಆದರೆ, ಅವರಿಗೆ ನೀಡಲಾಗುತ್ತಿರುವ ವೇತನ ರೂ.11,000/-ಗಳು ುವುದರಿಂದ ವಾಚ್‌ಮ್ಯಾನ್‌ಗಳು ಬರಲು ಒಪ್ಪುತ್ತಿಲ್ಲ. ಇಲಾಖೆಯಡಿ ಎಲ್ಲೆಲ್ಲಿ ವಾರ್ಡನ್‌ಗಳ ಹುದ್ದೆಗಳು ಲಿ ಇರುತ್ತದೆಯೋ ಅಂತಹ ಕಡೆಗಳಲ್ಲಿ ಆ ವಸತಿ ಶಾಲೆಗಳ ಹಿರಿಯ ಶಿಕ್ಷಕರುಗಳಿಗೆ ವಾರ್ಡನ್ ವಾಬ್ದಾರಿಗಳನ್ನು ನೀಡಲಾಗಿದೆ.

ಇನ್ನು ವಿದ್ಯಾರ್ಥಿ ನಿಲಯಗಳಲ್ಲಿ ಕಿರಿಯ ವಾರ್ಡನ್‌ಗಳಿಗೆ ಎಲ್ಲೆಲ್ಲಿ ಮುಂಬಡ್ತಿ ನೀಡಲು ಅವಕಾಶ ುತ್ತದೆಯೋ ಅಂತಹ ಕಡೆಗಳಲ್ಲಿ ವಾರ್ಡನ್‌ಗಳಾಗಿ ಮುಂಬಡ್ತಿ ನೀಡಿ, ನಂತರ ಆ ಹುದ್ದೆಗಳಿಗೆ ನೇರ ಮಕಾತಿ ಮಾಡಿಕೊಳ್ಳಲಾಗುವುದು. ಪ್ರಸ್ತುತ ಸ್ವಂತ ವೇತನದಲ್ಲಿ ವಾರ್ಡನ್ ಹುದ್ದೆಗಳಲ್ಲಿ ಕಾರ್ಯ ರ್ವಹಿಸುತ್ತಿದ್ದು, ಅದನ್ನು ಇತ್ತೀಚಿನ ಆದೇಶದ ಪ್ರಕಾರ ನಿಯಂತ್ರಿಸಲಾಗಿರುತ್ತದೆ.

ಕ್ರೈಸ್ ಸಂಸ್ಥೆಗೆ ಸಂಬಂಧಿಸಿದಂತೆ ಒಟ್ಟು 3,513 ಹುದ್ದೆಗಳ ಪೈಕಿ 2,919 ಹುದ್ದೆಗಳನ್ನು ುದುಕೊಳ್ಳಲಾಗಿದ್ದು, ಇದರಲ್ಲಿ ಆರ್ಟ್ ಮತ್ತು ಮ್ಯೂಸಿಕ್, ಕಂಪ್ಯೂಟರ್ ಸೈನ್ಸ್‌ಗೆ ಪಠ್ಯಕ್ರಮ ುವುದಿಲ್ಲದರ ಜೊತೆಗೆ ಶಿಕ್ಷಕರು ಸಹಾ ಇರುವುದಿಲ್ಲ ಮತ್ತು ಇತರೆ 5 ವಿಷಯಗಳಿಗೆ ಅತಿಥಿ ಪನ್ಯಾಸಕರನ್ನು ಪಡೆಯಲಾಗಿರುತ್ತದೆ. ಸಂಸ್ಥೆಯಡಿ 20 ಕಂಪ್ಯೂಟರ್ ಇರುವ 45 ಶಾಲೆಗಳಿದ್ದು, ಒಟ್ಟು 6 ಶಾಲೆಗಳಲ್ಲಿ ಕಂಪ್ಯೂಟರ್ ಶಿಕ್ಷಣ ಇರುತ್ತದೆ. ಈ ಪೈಕಿ ಕೆಲವು ಪೂರ್ಣ, ಕೆಲವು ಭಾಗಶಃ ಲೆಗಳೆಂದು ಪರಿಗಣಿಸಲಾಗುತ್ತಿದೆ. ಪ್ರಸ್ತುತ 11,174 ಕಂಪ್ಯೂಟರ್‌ಗಳ ಅವಶ್ಯಕತೆ ಇರುತ್ತದೆ.

ಇಲಾಖೆಯಡಿ ಬರುವ ಸುಮಾರು 155 ಶಾಲೆಗಳಿಗೆ ಇಂಟರ್‌ನೆಟ್ ವ್ಯವಸ್ಥೆಯನ್ನು ಕಲ್ಪಿಸಲು ಸಾಧ್ಯವಾಗಿರುವುದಿಲ್ಲವಾದ್ದರಿಂದ ಬಿಎಸ್‌ಎನ್‌ಎಲ್ ಅನ್ನು ಸಂಪರ್ಕಿಸಲಾಗಿದ್ದು, ಅವರು ನೀಡದಿದ್ದಲ್ಲಿ ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡುವ ಸದುದ್ದೇಶದಿಂದ ಖಾಸಗಿಯವರಿಂದ ಪಡೆಯಲು ಕ್ರಮ ವಹಿಸಲಾಗುವುದು.

ಸಂಸ್ಥೆಯ ವಸತಿ ಶಾಲಾ/ಕಾಲೇಜುಗಳಿಗೆ ಸಂಬಂಧಿಸಿದಂತೆ ಎಬಿವಿಪಿ ಶಾಲೆಗಳಲ್ಲಿ 14 ಪ್ರಾಂಶುಪಾಲರ ಹುದ್ದೆಗಳಿದ್ದು 2 ಹುದ್ದೆಗಳು ಖಾಲಿ ಇರುತ್ತವೆ. 26 ಕಾಲೇಜು ಪ್ರಾಂಶುಪಾಲರ ಪೈಕಿ 1 ಹುದ್ದೆ ಖಾಲಿ ಇರುತ್ತದೆ. ಉನ್ನತೀಕರಿಸಿದ ಶಾಲೆಗಳಲ್ಲಿ 10 ಪ್ರಾಂಶುಪಾಲರ ಹುದ್ದೆಗಳು ಖಾಲಿ ಇರುತ್ತವೆ. ಗ್ರೂಪ್ ಬಿ ವೃಂದದಲ್ಲಿ 780 ಹುದ್ದೆಗಳಲ್ಲಿ 11 ಹುದ್ದೆಗಳು ಮಾತ್ರ ಭರ್ತಿಯಾಗಿರುವುದಿಲ್ಲ. ಕೆಲವು ಕಡೆಗಳಲ್ಲಿ ಹೊರಗುತ್ತಿಗೆ ಆಧಾರದಲ್ಲಿ ಪ್ರಾಂಶುಪಾಲರನ್ನು ನೇಮಕ ಮಾಡಿಕೊಂಡಿದ್ದು, ಅವರನ್ನು ಅತಿಥಿ ಶಿಕ್ಷಕರಾಗಿ ಮುಂದುವರೆಸಲು ಆಡಳಿತ ಮಂಡಳಿಯು ತೀರ್ಮಾನಿಸಿರುತ್ತದೆ.

ಕ್ರೈಸ್ ಸಂಸ್ಥೆಯಿಂದ ಬಡ ಮಕ್ಕಳಿಗೆ ಉತ್ತಮ ಗುಣಮಟ್ಟದ ಶಿಕ್ಷಣ ನೀಡುವುದನ್ನು ಬಿಟ್ಟು, ಸಂಸ್ಥೆಯಿಂದ ಸಾವಿರಾರು ಕೋಟಿಗಳ ಕಟ್ಟಡ ನಿರ್ಮಾಣ ಕಾಮಗಾರಿಗಳನ್ನು ಮಾಡುತ್ತಿರುವುದರಿಂದ ಇಂಜಿನಿಯರಿಂಗ್ ವಿಭಾಗ ಇರುವಿಕೆ, ಬೈಲಾದಲ್ಲಿ ಅಳವಡಿಸಿಕೊಂಡಿರುವುದು ಮತ್ತು ಒದಗಿಸಿರುವ ಮಾಹಿತಿಯಲ್ಲಿ ಪಿ.ಎಂ.ಸಿ. ಯವರಿಂದ ಕಟ್ಟಡಗಳ ಕಾಮಗಾರಿ ಕೆಲಸಗಳನ್ನು ಮಾಡಿಸುತ್ತಿರುವುದಾಗಿ ತಿಳಿಸಿರುವುದರಿಂದ ಪಿ.ಎಂ.ಸಿ.ಗೆ ಮಾನ್ಯತೆ ಇದೆಯೇ, ಪಿಡಬ್ಲೂಡಿ, ಲ್ಯಾಂಡ್ ಆರ್ಮಿ ಹಾಗೂ ಇತರೆ ಸರ್ಕಾರಿ ಸಂಸ್ಥೆಗಳಿದ್ದರೂ ಪಿ.ಎಂ.ಸಿ.ರವರಿಗೆ ವಹಿಸಲು ಕಾರಣಗಳನ್ನು ಹಾಗೂ ಒಟ್ಟು ಮೊತ್ತದ ಎಲ್ಲಾ ವಿವರಗಳನ್ನು ಸಮಿತಿಯು ಬಯಸಿತು.

ಪ್ರಸ್ತುತ ಸುಮಾರು ರೂ.8,000-9,000 ಕೋಟಿಗಳ ಒಟ್ಟು 52 ಕಾಮಗಾರಿಗಳು ಪ್ರಗತಿಯಲ್ಲಿದ್ದು, ಅಂದಾಜುಗಳ ಮತ್ತು ಕಾಮಗಾರಿಗಳ ಪರಿಶೀಲನೆ ಮಾಡಲು ಇತ್ತೀಚೆಗೆ ನಿವೃತ್ತ ಇಂಜಿನಿಯರ್‌ರವರನ್ನು ನೇಮಕ ಮಾಡಿ ಅವರಿಂದ ವರದಿ ಪಡೆದು, ಪಿಎಂಸಿರವರು ಸಲ್ಲಿಸಿರುವ ಅಂದಾಜುಗಳಲ್ಲಿ ನ್ಯೂನ್ಯತೆಗಳಿರುವುದರಿಂದ ಪಿಎಂಸಿಗಳನ್ನು ಮುಚ್ಚಲು ಕ್ರಮವಹಿಸಲಾಗಿದೆ. ಸಂಸ್ಥೆಯಲ್ಲಿ ಮುಖ್ಯ ಇಂಜಿನಿಯರ್ ಮತ್ತು ಸೂಪರಿಂಟೆಂಡೆಂಟ್ ಇಂಜಿನಿಯರ್ ಒಳಗೊಂಡಂತೆ ಒಟ್ಟು 3-ಇಇ, 12-ಎಇಇ, 31-ಎಇ ಮತ್ತು ಇಇ-12 ಜನರನ್ನು ಎಸ್‌ಇ ರವರು ಪರಿಶೀಲಿಸಿದ ನಂತರವೇ ಹೊರಗುತ್ತಿಗೆ ಮೂಲಕ ಪಡೆಯಲಾಗಿರುತ್ತದೆ. ಇಲಾಖೆಗೆ ಸಂಬಂಧಪಟ್ಟಂತೆ ಹಲವಾರು ಕೆಲಸಗಳಿದ್ದು, ಈ ಪೈಕಿ ರೂ. 1100 ಕೋಟಿ ಬಿಲ್ ಮತ್ತು ಸುಮಾರು ರೂ.650 ಕೋಟಿಗಳ ಕಾಮಗಾರಿ ಪ್ರಗತಿಯಲ್ಲಿರುವುದರ ಜೊತೆಗೆ ಹಿಂದಿನ ವರ್ಷದಲ್ಲಿ ಮಾಡಿರುವ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಯಾವುದೇ ಬಿಲ್ ಪಾವತಿ

ಾಡಿಸುವುದಿಲ್ಲವೆಂದು ಹಾಗೂ ವಸತಿ ಶಾಲೆಗಳಿಗಾಗಿ ನಿವೇಶನ ಅಥವಾ ಜಾಗದ ಇರತೆಯಿರುವುದರಿಂದ ಆಯಾ ಜಿಲ್ಲಾಧಿಕಾರಿಗಳಿಗೆ ಪತ್ರದ ಮುಖೇನ ತಿಳಿಸಲಾಗಿದೆಯೆಂದು ಲಾಖಾಧಿಕಾರಿಗಳು ಸಮಿತಿಗೆ ವಿವರಿಸಿದರು.

ವಿದ್ಯಾರ್ಥಿ ನಿಲಯಗಳಲ್ಲಿರುವ ಮಕ್ಕಳಿಗೆ ಒದಗಿಸಲಾಗುತ್ತಿರುವ ಆಹಾರದ ಕ್ರಮ, ಆಹಾರ ದಾರ್ಥಗಳ ಸರಬರಾಜಿಗಾಗಿ ಟೆಂಡರ್ ಪ್ರಕ್ರಿಯೆ, ಆಹಾರ ಪದಾರ್ಥಗಳ ಗುಣಮಟ್ಟ ಮತ್ತು ಎಲ್ಲಾ ಹಾರ ಪದಾರ್ಥಗಳನ್ನು ಸರಬರಾಜು ಮಾಡುತ್ತಿರುವ ಕುರಿತು ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದಲ್ಲಿ ರಿಶೀಲಿಸುತ್ತಿರುವವರ ಕುರಿತು ಸಮಿತಿಯು ಇಲಾಖಾಧಿಕಾರಿಗಳಿಂದ ಮಾಹಿತಿಯನ್ನು ಬಯಸಿತು.

ಸಮಿತಿಗೆ ಉತ್ತರಿಸಿದ ಇಲಾಖಾಧಿಕಾರಿಗಳು, ಮಕ್ಕಳಿಗೆ ಆಹಾರ ನೀಡುವ ಕುರಿತು ದಿನನಿತ್ಯದ ಹಾರದ ಪಟ್ಟಿ ಇರುತ್ತದೆ. ಇಲಾಖೆಯಲ್ಲಿಯೇ ಟೆಂಡರ್ ಮಾಡಿ ಜಿಲ್ಲೆಗಳಿಗೆ ಕಳುಹಿಸಲಾಗುತ್ತಿದ್ದು, ುಣಮಟ್ಟ ಮತ್ತು ಒಟ್ಟು ಸರಬರಾಜನ್ನು ಪರಿಶೀಲಿಸಲು 5 ಸದಸ್ಯರಿರುವ ಒಂದು ಸಮಿತಿಯನ್ನು ಜಿಲ್ಲಾಮಟ್ಟದಲ್ಲಿ ಮಾಡಲಾಗಿದೆ. ಪ್ರಸ್ತುತ ಸಾಲಿನಿಂದ 50% ಟೆಂಡರ್ ಕರೆಯುವುದು ಮತ್ತು 50% ಕೇಂದ್ರೀಯ ಭಂಡಾರದಿಂದ ಪಡೆಯಲು ತೀರ್ಮಾನಿಸಲಾಗಿರುತ್ತದೆ. ಕಳೆದ 5 ವರ್ಷಗಳಲ್ಲಿ ಸುಮಾರು 8 ಗುತ್ತಿಗೆ ಸಂಸ್ಥೆಗಳು ಸರಬರಾಜು ಮಾಡಿರುತ್ತವೆ. ವಿದ್ಯಾರ್ಥಿ ನಿಲಯಗಳಿಗೆ ಒಂದು ನಿಗದಿತ ಅವಧಿಯಲ್ಲಿ ಅಂದರೆ ಜನವರಿ ಮಾಹೆಯಲ್ಲಿ ಟೆಂಡರ್ ಕರೆದು ಮಾರ್ಚ್ ತಿಂಗಳಿನಲ್ಲಿ ಅಂತಿಮಗೊಳಿಸಲಾಗುವುದು. ಕೆಲವು ಸಂದರ್ಭಗಳಲ್ಲಿ ಕಾರಣಾಂತರಗಳಿಂದ ವಿಳಂಬವಾಗುತ್ತವೆ. ಪ್ರತಿ ತಿಂಗಳು ಮಕ್ಕಳ ಸಂಖ್ಯೆಗೆ ಅನುಗುಣವಾಗಿ ಕೋರಿಕೆಯ ನಂತರ 10 ದಿನಗಳೊಳಗಾಗಿ ಸರಬರಾಜು ಮಾಡಬೇಕಾಗುತ್ತದೆಂದು ಸಮಿತಿಗೆ ವಿವರಿಸಿದರು.

**ಇಲಾಖಾಧಿಕಾರಿಗಳ ಮಾಹಿತಿಯ ಆಧಾರದ ಮೇಲೆ ಸಮಿತಿಯ ಪರಿಶೀಲನಾಂಶಗಳು:-**

- ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಮಕ್ಕಳಿಗೆ ಶಿಕ್ಷಣದ ವ್ಯವಸ್ಥೆಯನ್ನು ಗಮನದಲ್ಲಿಟ್ಟುಕೊಂಡು ಈ ವಿಶೇಷ ಶಾಲೆಗಳ ಯೋಜನೆಯನ್ನು ರೂಪಿಸಿಕೊಳ್ಳಲಾಗಿರುತ್ತದೆ.

- ಹಲವಾರು ವಿದ್ಯಾರ್ಥಿನಿಯರ ಶಾಲೆ ಅಥವಾ ವಸತಿ ಶಾಲೆಗಳಲ್ಲಿ ಮಹಿಳಾ ವಾರ್ಡನ್‌ಗಳು ಇರುವುದಿಲ್ಲ.

- ಕಳೆದ 5 ವರ್ಷಗಳಲ್ಲಿ ವಸತಿ ಶಾಲೆಗಳಲ್ಲಿರುವ ಸುಮಾರು 92 ಮಕ್ಕಳು ಸಾವನಪ್ಪಿರುವುದು ಹಾಗೂ ಈ ಪೈಕಿ 29 ಮಕ್ಕಳು ಆತ್ಮಹತ್ಯೆ ಮಾಡಿಕೊಂಡಿರುವುದಲ್ಲದೇ ಮಕ್ಕಳು ಮನೆಗಳಿಗೆ ಹೋಗುವ ದಾರಿಯಲ್ಲಿ ಸಾವನಪ್ಪಿರುವುದು.

- ವೇತನ ತಾರತಮ್ಯ ಇರುವುದು ಮತ್ತು ಇಡೀ ರಾಜ್ಯಾದ್ಯಂತ ಇಲಾಖೆಯಡಿ ಕೇವಲ 49 ವಾರ್ಡನ್‌ಗಳು ಮಾತ್ರ ಇರುವುದು.

- ಈ ವಿಶೇಷ ಶಾಲೆಗಳ ಸಂಖ್ಯೆ ಕಡಿಮೆ ಇರುವುದರ ಜೊತೆಗೆ ಶಿಕ್ಷಕರ ನೇಮಕಾತಿ ಗುಣಮಟ್ಟ ಸಮಾಧಾನಕರವಾಗಿರುವುದಿಲ್ಲದಿರುವುದು.

- ಹಲವಾರು ವಸತಿ ಶಾಲೆಗಳಲ್ಲಿ ಮತ್ತು ವಿದ್ಯಾರ್ಥಿ ನಿಲಯಗಳಲ್ಲಿ ಮೂಲಭೂತ ಸೌಲಭ್ಯಗಳ ಕೊರತೆ ತೀವ್ರತರವಾಗಿರುವುದು ಮತ್ತು ಮಕ್ಕಳಿಗೆ ನೀಡುತ್ತಿರುವ ಆಹಾರ ಪದಾರ್ಥಗಳ ಗುಣಮಟ್ಟ ಮತ್ತು ಸರಬರಾಜಿನ ಒಟ್ಟು ಮೊತ್ತವನ್ನು ಪರಿಶೀಲಿಸಲು ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿ ಇಲಾಖಾಧಿಕಾರಿಗಳಿಗೆ ಜವಾಬ್ದಾರಿಯನ್ನು ವಹಿಸದಿರುವುದು.

- ಬಹಳಷ್ಟು ಕಡೆಗಳಲ್ಲಿ ಆಹಾರದ ಟೆಂಡರ್ ಆದ ನಂತರ ಗುತ್ತಿಗೆದಾರರು ಸರಬರಾಜು ಮಾಡಲು ನೀಡುವ ಮಾದರಿಗಳಿಗೂ ಮತ್ತು ನಂತರ ಸರಬರಾಜು ಮಾಡುವ ಆಹಾರ ಪದಾರ್ಥಗಳಿಗೂ ತುಂಬಾ ವ್ಯತ್ಯಾಸವಾಗುವುದನ್ನು ವಾಸ್ತವವಾಗಿ ಗಮನಿಸದಿರುವುದು, ಇತ್ತೀಚೆಗೆ ಚಿಕ್ಕಮಗಳೂರಿನಲ್ಲಿ ಆಹಾರ ಪದಾರ್ಥಗಳನ್ನು ಅಧಿಕಾರಿಗಳು ಪರಿಶೀಲಿಸಿದಾಗ ಒಳಗೆ ಪ್ಲಾಸ್ಟಿಕ್ ಫೋಮ್ ಇದ್ದದ್ದು ಬೆಳಕಿಗೆ ಬಂದಿರುವುದು. ಇಂತಹ ಪ್ರಕರಣಗಳಲ್ಲಿ ಅತ್ಯಂತ ಪ್ರಭಾವಿಗಳು ಇರುವುದು.

- ಪ್ರಮುಖವಾಗಿ ಹೊರಗುತ್ತಿಗೆಯಲ್ಲಿ ತೆಗದುಕೊಳ್ಳುವ ಸಂದರ್ಭದಲ್ಲಿ ಮೀಸಲಾತಿ ಅನುಸರಿಸದೇ ಅಥವಾ ನಿಖರವಾದ ನಿಯಮಗಳು ಇಲ್ಲದಿರುವುದರಿಂದ ಪಜಾ/ಪಪಂ ಸಮುದಾಯಗಳಿಗೆ ಅನ್ಯಾಯವಾಗುತ್ತಿರುವುದು ಅಲ್ಲದೇ ಪ್ರಾಂಶುಪಾಲರಂತಹ ಉನ್ನತ ಹುದ್ದೆಗಳಿಗೆ ನೇಮಕ ಮಾಡಿಕೊಂಡಿರುವುದು.

- 10ನೇ ತರಗತಿಯವರೆಗೂ ಕಂಪ್ಯೂಟರ್ ತರಬೇತಿ ನೀಡುತ್ತಿದ್ದು, ಹಲವಾರು ಶಾಲೆಗಳಲ್ಲಿ ಕಂಪ್ಯೂಟರ್‌ಗಳು ಮತ್ತು ಶಿಕ್ಷಕರು ಸಹಾ ಇಲ್ಲದಿರುವುದು.

- ವಿದ್ಯಾರ್ಥಿನಿಯರು ಇರುವ 209 ವಸತಿ ಶಾಲೆಗಳಲ್ಲಿ ಕೇವಲ 93 ಮಹಿಳಾ ವಾರ್ಡನ್‌ಗಳು ಇರುವುದು ಅತ್ಯಂತ ಶೋಚನೀಯವಾಗಿರುವುದು ಮತ್ತು ಒಬ್ಬೊಬ್ಬರಿಗೆ ಎರಡು ಮೂರು ವಸತಿ ಶಾಲೆಗಳಲ್ಲಿ ಅಧಿಕ ಪ್ರಭಾರ ವಹಿಸಿರುವುದರಿಂದ ಹೆಣ್ಣುಮಕ್ಕಳ ರಕ್ಷಣೆಗೆ ತೀರಾ ತೊಂದರೆಯಾಗುತ್ತಿರುವುದು.

- ಕ್ರೈಸ್ ಸಂಸ್ಥೆಗೆ ಸಂಬಂಧಿಸಿದಂತೆ ಎಲ್ಲವೂ ಕೇಂದ್ರ ಕಛೇರಿಯಿಂದ ಆಡಳಿತ ಮಾಡುತ್ತಿದ್ದು, ಜಿಲ್ಲಾ ಮಟ್ಟದಲ್ಲಿ ಮತ್ತು ತಾಲ್ಲೂಕು ಮಟ್ಟದಲ್ಲಿ ನಿಯಂತ್ರಣ ಮಾಡಲು ಜಿಲ್ಲಾಮಟ್ಟ/ತಾಲ್ಲೂಕು ಮಟ್ಟದಲ್ಲಿ ಅಧಿಕಾರಿಗಳು ಇಲ್ಲದಿರುವುದು.

- ಈ ಸಂಸ್ಥೆಯಲ್ಲಿ ಖಾಯಂ ಇಂಜಿನಿಯರಿಂಗ್ ವಿಭಾಗ ಮತ್ತು ಇಂಜಿನಿಯರ್‌ಗಳು ಇಲ್ಲದಿರುವ ಕಾರಣ ಸಂಸ್ಥೆಯ ವತಿಯಿಂದ ನಿರ್ಮಾಣವಾಗುತ್ತಿರುವ ಹಲವಾರು ಕಾಮಗಾರಿಗಳು ತಪ್ಪು ಅಂದಾಜು ಪಟ್ಟಿಯನ್ನು ಸಲ್ಲಿಸಿರುವುದರಿಂದ ಸುಮಾರು ವರ್ಷಗಳಿಂದ ಕಾಮಗಾರಿಗಳು ಪೂರ್ಣಗೊಳ್ಳದೇ ಅಪೂರ್ಣವಾಗಿರುವುದು.

- ಸಾವಿರಾರು ಕೋಟಿ ರೂಪಾಯಿಗಳ ಕಾಮಗಾರಿಗಳನ್ನು ಕೈಗೊಳ್ಳಲು ಖಾಸಗಿ ಸಂಸ್ಥೆಯಾದ ಪಿಎಂಸಿರವರಿಗೆ 4ಜಿ ವಿನಾಯಿತಿ ನಿಯಮಬಾಹಿರವಾಗಿ ನೀಡಿರುವುದು.

- ಹೊರಗುತ್ತಿಗೆಯಿಂದ ಪಡೆದ ಇಂಜಿನಿಯರ್‌ಗಳನ್ನು ಪಡೆದುಕೊಂಡಿರುವುದರಲ್ಲಿ ಯಾವುದೇ ಮೀಸಲಾತಿಯನ್ನು ಪರಿಗಣಿಸದೇ ಈ ಜನಾಂಗದ ಇಂಜಿನಿಯರ್ ವಿದ್ಯಾಭ್ಯಾಸ ಮಾಡಿರುವವರಿಗೆ ಉದ್ಯೋಗ ಸಿಗದೇ ಅನ್ಯಾಯವಾಗುತ್ತಿರುವುದು.

**ಆಯುಕ್ತಾಲಯ :**

ವಿದ್ಯಾರ್ಥಿ ನಿಲಯಗಳಲ್ಲಿ 100 ವಿದ್ಯಾರ್ಥಿಗಳು ಇರುವ ಕಡೆಗಳಲ್ಲಿ 120 ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳಲಾಗುತ್ತಿದೆ. ಇದಲ್ಲದೇ ಕಟ್ಟಡಗಳು, ಶೌಚಾಲಯಗಳನ್ನೊಳಗೊಂಡಂತೆ ಮೂಲಭೂತ ಸೌಕರ್ಯಗಳಿಗೆ ಸಂಬಂಧಿಸಿದಂತೆ 120 ಕೋಟಿಗಳು, ಮಂಚ, ಹಾಸಿಗೆ, ಸಮವಸ್ತ್ರಗಳಿಗೆ ಒಟ್ಟಾರೆಯಾಗಿ 290 ಕೋಟಿಗಳು ಸೇರಿ ಒಟ್ಟು 1700 ಕೋಟಿಗಳ ಅಗತ್ಯವಿರುತ್ತದೆ. ಮೂಲಭೂತ ಸೌಲಭ್ಯಗಳಿಗೆ ಸಂಬಂಧಿಸಿದಂತೆ, ಬಾಕಿ ಬಿಲ್ಲುಗಳು, ರಿಪೇರಿಗಳು, ಅಧಿಕ ಕೊಠಡಿಗಳ ನಿರ್ಮಾಣ, ಶೌಚಾಲಯಗಳನ್ನು ಒದಗಿಸಲು 33 ಕೋಟಿಗಳು ತಕ್ಷಣ ಬೇಕಾಗಿರುತ್ತದೆ. ಪ್ರಸ್ತುತ ಒಟ್ಟಾರೆಯಾಗಿ 30,000 ಮಕ್ಕಳು ವಿದ್ಯಾರ್ಥಿ ನಿಲಯಗಳಲ್ಲಿದ್ದು, ಅಧಿಕವಾಗಿ 100 ಬಾಡಿಗೆ ಕಟ್ಟಡಗಳ ಅಗತ್ಯತೆಗೆ ಒತ್ತಡ ಹೆಚ್ಚಾಗಿರುತ್ತದೆ. 72 ನಿವೇಶನಗಳಲ್ಲಿ ವಿದ್ಯಾರ್ಥಿನಿಲಯಗಳು ನಡೆಯುತ್ತಿದ್ದು, ಅಗತ್ಯವಾಗಿರುವ ಅನುದಾನ ನೀಡಿದಲ್ಲಿ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು. ಜಿಲ್ಲಾಧಿಕಾರಿಗಳ ಹಂತದಲ್ಲಿ 3 ಸೈಟುಗಳನ್ನು ಕಟ್ಟುವ ಕುರಿತು ಮಾನ್ಯ ಮುಖ್ಯಮಂತ್ರಿಗಳು ಒಂದು ತಿಂಗಳು ಸಮಯ ನಿಗದಿಪಡಿಸಿರುವುದರಿಂದ ಅವುಗಳು ನೀಡಿದ್ದಲ್ಲಿ 104 ಸೈಟುಗಳು ಬರುತ್ತವೆ ಎಂದು ಇಲಾಖಾಧಿಕಾರಿಗಳು ಸಮಿತಿಗೆ ವಿವರಿಸಿದರು.

ಕಲ್ಯಾಣ ಕರ್ನಾಟಕ ಭಾಗದಲ್ಲಿರುವ ಜಿಲ್ಲೆಗಳಲ್ಲಿ ಇಲಾಖೆಯ ವಿದ್ಯಾರ್ಥಿ ನಿಲಯಗಳು, ಹೊಸ ವಿದ್ಯಾರ್ಥಿ ನಿಲಯಗಳಿಗೆ ಪ್ರಸ್ತಾವನೆಗಳು, ಈ ಕುರಿತು ಕೈಗೊಂಡ ಕ್ರಮಗಳು, 371ಜೆ ಯಡಿ ವಿಶೇಷ ಸ್ಥಾನಮಾನ ನೀಡಿರುವುದರಿಂದ ಸ್ವಾಭಾವಿಕವಾಗಿ ನೀಡುವ ಅನುದಾನದ ಜೊತೆಗೆ ವಿಶೇಷ ಅನುದಾನ ಕುರಿತು ಮತ್ತು ಪ್ರಗತಿಯಾಗಿರುವ ಬಗ್ಗೆ ಸಮಿತಿಯು ಇಲಾಖಾಧಿಕಾರಿಗಳಿಂದ ಮಾಹಿತಿ ಬಯಸಿತು.

ರಾಯಚೂರು ಜಿಲ್ಲೆಗೆ 13 ವಿದ್ಯಾರ್ಥಿನಿಲಯಗಳನ್ನು ಎಸ್‌ಸಿಎಸ್‌ಪಿ/ಟಿಎಸ್‌ಪಿ ಅನುದಾನದಡಿ ನಿರ್ಮಾಣ ಮಾಡಲಾಗಿರುತ್ತದೆ. ಪ್ರಸ್ತುತ ವರ್ಷದ ಕ್ರಿಯಾ ಯೋಜನೆಯನ್ನು ಸಿದ್ಧಪಡಿಸಬೇಕಾಗಿದ್ದು, ರಾಜ್ಯ ಪರಿಷತ್ ಸಭೆಯಲ್ಲಿ ಅನುಮೋದನೆ ನೀಡಿರುವ ಪ್ರಕಾರ ಹೆಚ್ಚುವರಿ ಕಟ್ಟಡಗಳು ಮತ್ತು

ಮೂಲಭೂತ ಸೌಕರ್ಯಗಳನ್ನು ಒದಗಿಸಬೇಕಾಗುತ್ತದೆ. ಅಲ್ಲದೇ ಎಸ್‌ಸಿಎಸ್‌ಪಿ/ಟಿಎಸ್‌ಪಿ ಅನುದಾನದಡಿ 100 ವಿದ್ಯಾರ್ಥಿ ನಿಲಯಗಳ ನಿರ್ಮಾಣಕ್ಕಾಗಿ ಲೋಕೋಪಯೋಗಿ ಇಲಾಖೆಗೆ ವಹಿಸಲಾಗಿರುತ್ತದೆ. ಮಾರ್ಚ್-2023 ಅಂತ್ಯಕ್ಕೆ 542 ಕೋಟಿಗಳ ಅನುದಾನ ಬಾಕಿಯಿರುವುದನ್ನು ವಸತಿ ನಿಲಯಗಳ ನಿರ್ಮಾಣಕ್ಕಾಗಿ ಬಳಕೆ ಮಾಡಿಕೊಳ್ಳುವಂತೆ ಕೆಕೆಆರ್‌ಡಿಬಿಗೆ ತಿಳಿಸಲಾಗಿರುತ್ತದೆ ಹಾಗೂ ಪ್ರತಿ ವಿದ್ಯಾರ್ಥಿ ನಿಲಯಕ್ಕೆ ಮಂಜೂರಾತಿ ದಾಖಲಾತಿ ಇದ್ದು, ಅದಕ್ಕಿಂತ ಹೆಚ್ಚುವರಿಯಾಗಿ ತೆಗೆದುಕೊಂಡು 160 ಮಕ್ಕಳಿಗೆ ಸೀಮಿತಗೊಳಿಸಲಾಗಿರುತ್ತದೆ. ಮಂಜೂರಾತಿಗಿಂತ ಶೇ. 25%ರಷ್ಟು ಹೆಚ್ಚು ದಾಖಲಿಸಿಕೊಂಡಲ್ಲಿ ಮತ್ತೊಂದು ಹಾಸ್ಟೆಲ್ ವ್ಯವಸ್ಥೆ ಮಾಡಬೇಕಾಗುತ್ತದೆ. ಪ್ರಸ್ತುತ ಇಲಾಖೆಯ ವಿದ್ಯಾರ್ಥಿ ನಿಲಯಗಳಲ್ಲಿ ಶೇ. 52% ಮಕ್ಕಳು ಹೆಚ್ಚುವರಿಯಾಗಿರುತ್ತಾರೆ.

ಆದರೆ ಕೆಲವು ಸಂದರ್ಭಗಳಲ್ಲಿ, ವಿದ್ಯಾರ್ಥಿನಿಲಯಗಳ ಬಾಡಿಗೆ ಒಂದು ವರ್ಷದ ನಂತರ ಬರುತ್ತದೆ ಎಂಬ ಕಾರಣದಿಂದ ಬಾಡಿಗೆಗೆ ಕಟ್ಟಡಗಳನ್ನು ನೀಡಲು ಯಾರೂ ಆಸಕ್ತಿ ತೋರದಿರುವುದರ ಜೊತೆಗೆ, ಲೋಕೋಪಯೋಗಿ ಇಲಾಖೆಯಿಂದಲೂ ಸಹ ಸಹಕಾರ ಸಿಗುತ್ತಿಲ್ಲ. ಆದಾಗ್ಯೂ ಸಹಾ ಸುಮಾರು 4,641 ಪಿಜಿ, 491 ಮಕ್ಕಳು ಯುಜಿ ಮತ್ತು ಇಂಜಿನಿಯರಿಂಗ್ ವಿದ್ಯಾಭ್ಯಾಸ ಮಾಡುತ್ತಿದ್ದಾರೆ ಎಂದು ಇಲಾಖಾಧಿಕಾರಿಗಳು ಸಮಿತಿಗೆ ವಿವರಿಸಿದರು.

**ಸಮಿತಿಯ ಪರಿಶೀಲನಾಂಶಗಳು :-**

- ಕೆಲವು ವಿದ್ಯಾರ್ಥಿ ನಿಲಯಗಳಿಗೆ ಕಟ್ಟಡಗಳಿರುವುದಿಲ್ಲ, ಹೆಚ್ಚುವರಿಯಾಗಿ ಮಕ್ಕಳನ್ನು ಹಾಸ್ಟೆಲ್‌ಗಳಲ್ಲಿ ಸೇರಿಸಿಕೊಂಡಿರುವುದರಿಂದ ಮೂಲಭೂತ ಸೌಕರ್ಯಗಳಿಲ್ಲದಿರುವುದು.
- ಈ ಸಮುದಾಯಗಳ ಕೆಲವು ವಿದ್ಯಾರ್ಥಿನಿಲಯಗಳಲ್ಲಿ ಈಗಲೂ ಸರಿಯಾಗಿ ಹಾಸಿಗೆ, ಮಂಚಗಳಿಲ್ಲದೇ ಒಬ್ಬ ವಿದ್ಯಾರ್ಥಿಗೆ ಮಲಗುವ ಸ್ಥಳಗಳಲ್ಲಿ ಇಬ್ಬರು-ಮೂವರು ಮಕ್ಕಳು ಮಲಗುವ ಪರಿಸ್ಥಿತಿ ಆಗಿರುವುದಲ್ಲದೇ, ವಿದ್ಯಾರ್ಥಿನಿಯರ ಹಾಸ್ಟೆಲ್‌ಗಳಲ್ಲೂ ಸಹ ಇದೇ ಪರಿಸ್ಥಿತಿ ಆಗಿರುವುದು ತುಂಬಾ ಶೋಚನೀಯವಾಗಿರುವುದು.
- ಈ ಮೂಲಭೂತ ಸೌಕರ್ಯಗಳಿಗಾಗಿ ಅಗತ್ಯವಿರುವ ಅನುದಾನ ಮತ್ತು ಅನುಮತಿಗಾಗಿ ಆರ್ಥಿಕ ಇಲಾಖೆಗೆ ಪ್ರಸ್ತಾವನೆಯನ್ನು ಸಲ್ಲಿಸಿದರೆ ತಿರಸ್ಕೃತವಾಗುತ್ತಿರುವುದು.
- ನಗರಸಭೆ, ನಗರ ಪಾಲಿಕೆ ಇನ್ನಿತರೆ ಸ್ಥಳೀಯ ಸಂಸ್ಥೆಗಳಲ್ಲಿ ಎಸ್‌ಸಿಎಸ್‌ಪಿ/ಟಿಎಸ್‌ಪಿ ಅನುದಾನವನ್ನು ಮೀಸಲಿಟ್ಟರೂ ಶೇಕಡ 90 ರಷ್ಟು ಸಮರ್ಪಕವಾಗಿ ಬಳಕೆಯಾಗದಿರುವುದು.

- ಕಲ್ಯಾಣ ಕರ್ನಾಟಕ ಭಾಗದ ಜಿಲ್ಲೆಗಳಲ್ಲಿ ಇಲಾಖೆಯ ವಿದ್ಯಾರ್ಥಿನಿಲಯಗಳಲ್ಲಿ 100 ಮಕ್ಕಳು ಇರುವ ಕಡೆಗಳಲ್ಲಿ 400 ಮಕ್ಕಳಿರುವುದರಿಂದ ಸೌಲಭ್ಯಗಳನ್ನು ಒದಗಿಸಲು ಕಷ್ಟವಾಗುತ್ತಿರುವುದು.
- ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳಲ್ಲಿ ಒಟ್ಟಾರೆಯಾಗಿ ಕ್ರೈಸ್ ವಸತಿ ಶಾಲೆಗಳನ್ನೂ ಒಳಗೊಂಡಂತೆ ಈ ಸಮುದಾಯಗಳ ಮಕ್ಕಳ ಶಿಕ್ಷಣಕ್ಕೆ ಸಂಬಂಧಿಸಿದಂತೆ ಹಾಸ್ಟೆಲ್‌ಗಳು, ಕಟ್ಟಡಗಳು, ಯೂನಿವರ್ಸಿಟಿ, ವಿದ್ಯಾರ್ಥಿ ವೇತನ, ಶಿಕ್ಷಕರ ತೀವ್ರ ಕೊರತೆ, ಮೂಲಭೂತ ಸೌಕರ್ಯಗಳಿಗೆ ಅನುದಾನದ ಕೊರತೆ ಇರುವುದು.

## ಕರ್ನಾಟಕ ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆ

ಇಲಾಖೆಗೆ ಪ್ರಸಕ್ತ ಸಾಲಿನಲ್ಲಿ ನಿಗದಿಯಾಗಿರುವ, ಮಂಜೂರಾಗಿರುವ, ಕೊರತೆಯಾಗಿರುವ ಅನುದಾನ, ಯೋಜನೆಗಳು/ಕಾರ್ಯಕ್ರಮಗಳು ಹಾಗೂ ಇಲಾಖೆಯಡಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ/ನೌಕರರ ವಿವರಗಳು, ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಕೈಗೊಂಡ ಕ್ರಮಗಳು, ವಿದ್ಯಾರ್ಥಿ ವೇತನ, ಅನುದಾನದ ಕೊರತೆ ಮತ್ತು ಇಲಾಖೆಯಲ್ಲಿ ವಾಸ್ತವವಾಗಿ ಎದುರಿಸುತ್ತಿರುವ ಸಮಸ್ಯೆಗಳ ಕುರಿತು ಸಮಿತಿಯು ಇಲಾಖಾಧಿಕಾರಿಗಳಿಂದ ಮಾಹಿತಿ ಬಯಸಿತು.

ಇಲಾಖೆಯಡಿ ಒಟ್ಟು 136 ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳಿದ್ದು, 9,712 ಮಂಜೂರಾತಿ ಸಂಖ್ಯೆ, ಆದರೆ 8,922 ದಾಖಲಾತಿ ಸಂಖ್ಯೆ ಮಂಜೂರಾತಿಗಿಂತಲೂ ಕಡಿಮೆ ಇರುತ್ತದೆ.

ರಾಜ್ಯದಲ್ಲಿ ಇಲಾಖೆಯ 134 ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಿರುತ್ತವೆ. 14,726 ಮಕ್ಕಳಿಗೆ ಮಂಜೂರಾತಿ ಸಂಖ್ಯೆಯಾಗಿದ್ದು, 18,377 ದಾಖಲಾತಿ ಸಂಖ್ಯೆಯಾಗಿ ಸುಮಾರು 3,651 ವಿದ್ಯಾರ್ಥಿಗಳು ಹೆಚ್ಚಿಗೆಯಾಗಿ ಈವರೆವಿಗೂ ದಾಖಲಾಗುತ್ತಲೇ ಇರುತ್ತಾರೆ. 83 ಸ್ವಂತ ಕಟ್ಟಡಗಳಿರುತ್ತವೆ. 38 ನಿರ್ಮಾಣ ಹಂತದಲ್ಲಿರುತ್ತವೆ. 11 ನಿವೇಶನ ಲಭ್ಯತೆ ಇದ್ದು, 2 ನಿವೇಶನ ಅವಶ್ಯಕತೆ ಇರುತ್ತದೆ.

ಹಾಗೆಯೇ ಇಲಾಖೆಯಡಿ 119 ಆಶ್ರಮ ಶಾಲೆಗಳಿದ್ದು, 14,235 ಮಂಜೂರಾತಿ ಸಂಖ್ಯೆಗೆ 11,242 ಮಕ್ಕಳು ದಾಖಲಾಗಿರುತ್ತಾರೆ. 114 ಆಶ್ರಮ ಶಾಲೆಗಳಿಗೆ ಸ್ವಂತ ಕಟ್ಟಡಗಳಿದ್ದು, 5 ಪ್ರಗತಿಯಲ್ಲಿರುತ್ತವೆ. ಒಟ್ಟು 96 ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯಗಳು, 40 ಬಾಲಕಿಯರ ವಿದ್ಯಾರ್ಥಿ ನಿಲಯಗಳಲ್ಲಿ 43 ಪುರುಷ ವಾರ್ಡನ್‌ಗಳು ಮತ್ತು 81 ಮಹಿಳಾ

ವಾರ್ಡನ್‌ಗಳು ಕಾರ್ಯನಿರ್ವಹಿಸುತ್ತಿದ್ದು, 150 ವಾರ್ಡನ್ ಹುದ್ದೆಗಳು ಖಾಲಿ ಇರುವುದಲ್ಲದೇ, ಈ ಆಶ್ರಮಗಳಿಗೆ 500 ಹುದ್ದೆಗಳು ಮಂಜೂರಾಗಿರುವುದಕ್ಕೆ ಕೇವಲ 104 ಹುದ್ದೆಗಳನ್ನು ಮಾತ್ರ ಭರ್ತಿ ಮಾಡಲಾಗಿದೆ. ಕೆಲವು ಕಡೆಗಳಲ್ಲಿ ಸಮಾಜ ಕಲ್ಯಾಣ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣದ ಎರಡೂ ವಿದ್ಯಾರ್ಥಿ ನಿಲಯಗಳ ಜವಾಬ್ದಾರಿಗಳನ್ನು ಒಬ್ಬರೇ ವಾರ್ಡನ್ ವಹಿಸಿಕೊಳ್ಳುತ್ತಿರುವುದು ಸಹಾ ಇರುತ್ತದೆ. ಅಲ್ಲದೇ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಅನುಮತಿ ನೀಡುವಂತೆ ಆರ್ಥಿಕ ಇಲಾಖೆ ಪ್ರಸ್ತಾವನೆಯನ್ನು ಸಲ್ಲಿಸಿದ್ದು, ಅನುಮತಿ ನೀಡಿರುವುದಿಲ್ಲವೆಂದು ಇಲಾಖಾಧಿಕಾರಿಗಳು ಸಮಿತಿಗೆ ಮಾಹಿತಿ ತಿಳಿಸಿದರು.

ಇಲಾಖಾಧಿಕಾರಿಗಳು ನೀಡಿದ ಮಾಹಿತಿಯನ್ನು ಆಲಿಸಿದ ಸಮಿತಿಯು, ಈ ಬಡ ಮಕ್ಕಳಿಗೆ/ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ನೀಡುತ್ತಿರುವುದರಲ್ಲಿ ಈಗಾಗಲೇ 8 ತಿಂಗಳುಗಳು ವಿಳಂಬವಾಗಿರುತ್ತದೆ ಮತ್ತು ಪ್ರಸ್ತುತ ಸಾಲಿನಲ್ಲಿ ಈವರೆಗೂ ವಿದ್ಯಾರ್ಥಿ ವೇತನದ ಪೋರ್ಟಲ್ ತೆರೆದಿಲ್ಲದಿರುವುದು ಮತ್ತು ವಿದ್ಯಾರ್ಥಿ ವೇತನದಲ್ಲಿ ರಾಜ್ಯ ಹಾಗೂ ಕೇಂದ್ರ ಸರ್ಕಾರಗಳು ನೀಡುತ್ತಿರುವ ಅನುಪಾತದ ಪಾಲು, ಒದಗಿಸುತ್ತಿರುವ ಅನುದಾನ ಕುರಿತು ಸಮಿತಿಯು ಇಲಾಖಾಧಿಕಾರಿಗಳಿಂದ ಮಾಹಿತಿ ಬಯಸಿತು.

2022–23ನೇ ಸಾಲಿನಲ್ಲಿ ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನಕ್ಕಾಗಿ ಒಟ್ಟು ಸುಮಾರು 1,35,000 ಅರ್ಜಿಗಳು ಸ್ವೀಕೃತವಾಗಿ 1,30,000 ಅರ್ಜಿಗಳನ್ನು ಪರಿಶೀಲಿಸಿದ್ದು, ಕೇಂದ್ರ ಸರ್ಕಾರದ ಅನುದಾನವು ಸಹಾ ಬರಬೇಕಾಗಿರುತ್ತದೆ. ಇದರಲ್ಲಿ ರಾಜ್ಯ ಮತ್ತು ಕೇಂದ್ರ ಸರ್ಕಾರಗಳು 75:25 ಅನುಪಾತದಲ್ಲಿ ನೀಡಲಾಗುತ್ತಿದ್ದು, ಸುಮಾರು 200 ಕೋಟಿಗಳ ಅಗತ್ಯವಿರುತ್ತದೆ. ವಿದ್ಯಾರ್ಥಿ ವೇತನಕ್ಕೆ ಸಂಬಂಧಿಸಿದಂತೆ ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ಮಧ್ಯೆ ಒಂದು ಸಾಫ್ಟ್‌ವೇರ್ ಅಪ್ಲಿಕೇಷನ್ ಇರುತ್ತದೆ. ಕಳೆದ ಎರಡು ವರ್ಷಗಳಿಂದ ಎಸ್‌ಎನ್‌ಎ ಎಂದು ಪ್ರಾರಂಭ ಮಾಡಿಕೊಂಡಿದ್ದು, ಅದರ ಅಡಿ ಬ್ಯಾಂಕ್ ಅಕೌಂಟ್ ತೆರೆದು, ಅದರಲ್ಲಿ ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರಗಳಿಂದ ಅನುದಾನ ಬರುತ್ತದೆ. ಇದರಿಂದ ಹಣ ಉಪಯೋಗಿಸದೇ ಉಳಿಸಿಕೊಂಡಿದ್ದಲ್ಲಿ ಮುಂದಿನ ವರ್ಷದಲ್ಲಿ ಕೇಂದ್ರ ಸರ್ಕಾರದಿಂದ ಅನುದಾನ ನೀಡುವುದಿಲ್ಲವಾದ್ದರಿಂದ ಬಾಕಿ ಉಳಿದಿರುವ ಹಣವನ್ನು ಕೂಡಲೇ ಖರ್ಚು ಮಾಡಬೇಕಾಗುತ್ತದೆ. ವಿದ್ಯಾರ್ಥಿ ವೇತನಕ್ಕಾಗಿ ಸ್ವೀಕೃತಗೊಂಡಿರುವ ಎಲ್ಲಾ ಅರ್ಜಿಗಳನ್ನು ತಾಲ್ಲೂಕು ಮತ್ತು ಜಿಲ್ಲಾ ಮಟ್ಟದಲ್ಲಿ ಶೀಘ್ರವಾಗಿ ಪರಿಶೀಲಿಸಿ ವಿಲೇ ಮಾಡಲಾಗುವುದು. ಇನ್ನೂ ರೂ. 53 ಕೋಟಿಗಳ ಪ್ರೋತ್ಸಾಹ ಹಣ ನೀಡುವುದು ಬಾಕಿ

ಇರುವುದರಿಂದ ಪ್ರಸ್ತಾವನೆಯನ್ನು ಆರ್ಥಿಕ ಇಲಾಖೆಗೆ ಸಲ್ಲಿಸಲಾಗಿದ್ದು, ಒಟ್ಟಾರೆಯಾಗಿ ಸುಮಾರು ರೂ. 400 ಕೋಟಿಗಳಷ್ಟು ಅಗತ್ಯವಿರುತ್ತದೆ. ಇದಲ್ಲದೇ,

- ಈ ಸಮುದಾಯಗಳ ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ಪ್ರತಿಷ್ಠಿತ ಶಾಲೆಗಳಲ್ಲಿ ದಾಖಲು ಮಾಡಿಸುವುದು.
- ರಾಷ್ಟ್ರಮಟ್ಟದ ಸಂಸ್ಥೆಗಳಲ್ಲಿ ಪ್ರವೇಶ ಪಡೆಯುವಂತಹ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನ ನೀಡುವುದು.
- ಪ್ರಬುದ್ಧ ಯೋಜನೆಯಡಿ ವಿದೇಶಿ ವಿಶ್ವವಿದ್ಯಾಲಯಗಳಲ್ಲಿ ವಿದ್ಯಾಭ್ಯಾಸ ಮಾಡುವ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನ ನೀಡುವುದು.
- ಕಾನೂನು ಪದವಿ ಓದುವ ವಿದ್ಯಾರ್ಥಿಗಳಿಗೆ ಶಿಷ್ಯ ವೇತನ ನೀಡಲಾಗುತ್ತಿದೆ.

ಒಟ್ಟು 2,594 ವಾಲ್ಮೀಕಿ ಸಮುದಾಯ ಭವನಗಳು ಮಂಜೂರಾಗಿದ್ದು, 634 ಕೋಟಿ ಮಂಜೂರಾತಿಯಾಗಿರುವ ಪೈಕಿ 416 ಕೋಟಿ ಬಿಡುಗಡೆ ಮಾಡಿದ್ದು 153 ಕೋಟಿ ಅನುದಾನ ಬಿಡುಗಡೆಯಾಗಲು ಬಾಕಿ ಇರುತ್ತದೆ.

- ಪೂರ್ಣಗೊಂಡ ಭವನಗಳು – 154
- ಪ್ರಗತಿಯಲ್ಲಿರುವ ಭವನಗಳು – 452
- ಇನ್ನು ಪ್ರಾರಂಭಿಸಬೇಕಾಗಿರುವುದು – 430
- ನಿವೇಶನಗಳು ಅಗತ್ಯವಿರುವುದು – 200

ಈ ವಾಲ್ಮೀಕಿ ಸಮುದಾಯ ಭವನಗಳಿಗೆ ಘಟಕ ವೆಚ್ಚವಾಗಿ ಈ ಕೆಳಕಂಡಂತೆ ಅನುದಾನವನ್ನು ನೀಡಲಾಗುವುದು.

- ಗ್ರಾಮ ಮಟ್ಟದಲ್ಲಿ – 20 ಲಕ್ಷಗಳು
- ಹೋಬಳಿ ಮಟ್ಟದಲ್ಲಿ – 75 ಲಕ್ಷಗಳು
- ತಾಲ್ಲೂಕು ಮಟ್ಟದಲ್ಲಿ – 2 ಕೋಟಿ
- ಜಿಲ್ಲಾ ಮಟ್ಟದಲ್ಲಿ – 4 ಕೋಟಿ

ಇದಲ್ಲದೇ ಪ್ರಗತಿ ಕಾಲೋನಿಗಳ ಅಭಿವೃದ್ಧಿಗಾಗಿ, ಸ್ಮಶಾನ ಭೂಮಿಗಾಗಿ ಮತ್ತು ಪರಿಶಿಷ್ಟ ಪಂಗಡಗಳ ಧಾರ್ಮಿಕ ಸಂಸ್ಥೆಗಳು, ಸಂಘ–ಸಂಸ್ಥೆಗಳು, ಟ್ರಸ್ಟ್‌ಗಳು ನಡೆಸುವ ವಿದ್ಯಾರ್ಥಿ ನಿಲಯಗಳು ಮತ್ತು ಶಾಲಾ–ಕಟ್ಟಡಗಳಿಗೆ ಅನುದಾನವನ್ನು ನೀಡುವ ಯೋಜನೆಗಳಿರುವುದಾಗಿ ಇಲಾಖಾಧಿಕಾರಿಗಳು ಸಮಿತಿಗೆ ಮಾಹಿತಿ ಒದಗಿಸಿದರು.

**ಸಮಿತಿಯ ಪರಿಶೀಲನಾಂಶಗಳು :**

- ➢ ಆಯವ್ಯಯ ಮಂಡನೆಯಾದ ಕೂಡಲೇ ಅನುದಾನ ಬಳಕೆಯ ಕ್ರಿಯಾ ಯೋಜನೆ ರೂಪಿಸಿಕೊಳ್ಳದೇ, ಸಿದ್ಧರಾಗಿರದೇ ಅನುದಾನ ಬಂದ ನಂತರ ಯೋಜನೆಗಳನ್ನು ರೂಪಿಸಿಕೊಳ್ಳುತ್ತಿರುವುದು.
- ➢ ಎರಡು ಮತ್ತು ಮೂರು ಹಾಸ್ಟೆಲ್‌ಗಳಿಗೆ ಒಬ್ಬರೆ ವಾರ್ಡನ್ ಇರುವುದರಿಂದ ಎಲ್ಲಾ ವಿದ್ಯಾರ್ಥಿನಿಯರ ನಿಲಯಗಳಲ್ಲಿ ಸುರಕ್ಷತೆ ಇಲ್ಲದಿರುವುದು.
- ➢ ನೇಮಕಾತಿ ಪ್ರಸ್ತಾವನೆಗಳಿಗೆ ಆರ್ಥಿಕ ಇಲಾಖೆ ಅನುಮೋದನೆ ನೀಡದಿರುವುದು.

**ಅಲೆಮಾರಿ ಅಭಿವೃದ್ಧಿ ನಿಗಮ**

ಈ ಅಲೆಮಾರಿ ಜನಾಂಗದವರು ಹಲವಾರು ವರ್ಷಗಳಿಂದ ಟೆಂಟ್‌ಗಳಲ್ಲಿಯೇ ವಾಸಿಸುತ್ತಿದ್ದು, ಅವರಿಗೆ ಸಾಮಾಜಿಕ ಮತ್ತು ಆರ್ಥಿಕ ಭದ್ರತೆ ನೀಡುವ ದೃಷ್ಟಿಯಿಂದ ಈ ನಿಗಮದಲ್ಲಿರುವ ಜನಾಂಗಕ್ಕೆ ಪೂರಕವಾಗಿ ಯಾವ ಯಾವ ಬೇಡಿಕೆಗಳ ಕುರಿತು, ಮುಖ್ಯವಾಗಿ ಈ ಜನಾಂಗಕ್ಕೆ ಮನೆ, ಸೈಟು ಇಲ್ಲದಿರುವುದರಿಂದ ನಿಗಮದಿಂದ ರೂಪಿಸಿಕೊಂಡಿರುವ ಯೋಜನೆ/ಕಾರ್ಯಕ್ರಮಗಳನ್ನು ಕುರಿತು ಸಮಿತಿಯು ಇಲಾಖಾಧಿಕಾರಿಗಳಿಂದ ವಿವರ ಬಯಸಿತು.

ಅಲೆಮಾರಿ ಕೋಶ ಎಂದು ಇದ್ದಂತಹದನ್ನು ಡಿಸೆಂಬರ್ 2022 ಅಲೆಮಾರಿ ಅಭಿವೃದ್ಧಿ ನಿಗಮ ಎಂದು ಮಾಡಲಾಯಿತು. ಅಲೆಮಾರಿ ಜನಾಂಗದಲ್ಲಿ ಈ ಕೆಳಕಂಡಂತೆ ಒಟ್ಟಾರೆ ಜಾತಿಗಳು ಇರುತ್ತವೆ.

- ❖ ಪರಿಶಿಷ್ಟ ಜಾತಿಯಲ್ಲಿ – 53 ಜಾತಿಗಳು
- ❖ ಪರಿಶಿಷ್ಟ ಪಂಗಡದಲ್ಲಿ – 22 ಜಾತಿಗಳು

ಈ ಹಿಂದೆ ವಸತಿ ಇಲಾಖೆಯಿಂದ 10,000 ಮನೆಗಳನ್ನು ಮಂಜೂರು ಮಾಡಿ 300 ಕೋಟಿಗಳನ್ನು ನೀಡಲಾಗಿರುತ್ತದೆ. ಈ ಪೈಕಿ 3008 ಮನೆಗಳಿಗೆ ಮಾತ್ರ ಕಾಮಗಾರಿಯು ಪ್ರಗತಿಯಲ್ಲಿರುತ್ತವೆ. ನಿಗಮದಡಿ ಯೋಜನೆಗಳನ್ನು ಈ ಕೆಳಕಂಡಂತೆ ಹಮ್ಮಿಕೊಳ್ಳಲಾಗಿರುತ್ತದೆ.

- ಸ್ವಯಂ ಉದ್ಯೋಗ
- ಉದ್ಯಮಶೀಲತಾ ಯೋಜನೆ

- 2 ಲಕ್ಷ ಸಣ್ಣ ಪ್ರಮಾಣ ವ್ಯಾಪಾರಗಳಿಗೆ ಸಹಾಯಧನ
- 4 ಲಕ್ಷಗಳಲ್ಲಿ ಸರಕು ಸಾಗಾಣಿಕೆ
- ಪ್ರವಾಸಿ ಟ್ಯಾಕ್ಸಿಗಳಿಗೆ ಸಹಾಯಧನ
- ಮೈಕ್ರೋ ಕ್ರೆಡಿಟ್ ಯೋಜನೆ(ಪ್ರೇರಣ)
- ಭೂ ಒಡೆತನ ಯೋಜನೆ
- ಗಂಗಾ ಕಲ್ಯಾಣ ಯೋಜನೆ
- ವಿವಿಧ ತರಬೇತಿ ಯೋಜನೆಗಳು

ಅಲೆಮಾರಿಗಳಲ್ಲಿ 34 ಸಮುದಾಯಗಳು ಇರುತ್ತವೆ. ಕೆಲವು ಅಲೆಮಾರಿಗಳು ಒಂದು ಊರಿನಿಂದ ಮತ್ತೊಂದು ಊರಿಗೆ ಹೋಗುತ್ತಾರೆ. ಅಂತಹವರಿಗೆ ಸ್ವಯಂ ಉದ್ಯೋಗ, ಉದ್ಯಮ ಶೀಲತೆ ಯೋಜನೆಗಳು ಇರುತ್ತವೆ. ಈ ಅಲೆಮಾರಿ ಸಮುದಾಯಗಳಿಗೆ ರಾಜೀವ್‌ಗಾಂಧಿ ಹೌಸಿಂಗ್ ಕಾರ್ಪೋರೇಷನ್‌ನಿಂದ ನೀಡುವ ನಮೂನೆಯಲ್ಲಿರುವ ಕೆಲವು ಖಾತೆ, ನಂಬರ್‌ಗಳು ಇರದೇ ಮಾಹಿತಿಗಳು ಭರ್ತಿ ಮಾಡಲು ಸಾಧ್ಯವಾಗುವುದಿಲ್ಲವಾದ್ದರಿಂದ ಮೀನುಗಾರಿಕೆ ಇಲಾಖೆಯಲ್ಲಿರುವಂತೆ ಮೀನುಗಾರರಿಗೆ ಮನೆ ಕಟ್ಟಲು ನೀಡುತ್ತಿರುವಂತೆ ಈ ಅಲೆಮಾರಿ ಜನಾಂಗಕ್ಕೂ ಸಹಾ ಮನೆಗಳನ್ನು ಕಟ್ಟಿಕೊಡಲು ಅನುದಾನ ಬೇಕಾಗುತ್ತದೆ ಎಂದು ಇಲಾಖಾಧಿಕಾರಿಗಳು ಸಮಿತಿಗೆ ವಿವರಿಸಿದರು.

**ಸಮಿತಿಯ ಪರಿಶೀಲನಾಂಶಗಳು :**

- ಈ ಅಲೆಮಾರಿ ಸಮುದಾಯಗಳಲ್ಲಿ ಅಲೆಮಾರಿಗಳಲ್ಲದವರು ಸಹಾ ಸೇರಿರುವುದು.
- ಮನೆ, ನಿವೇಶನಗಳನ್ನು ನೀಡಲು ನಿರ್ದಿಷ್ಟವಾದ ರೂಪುರೇಷೆಗಳು ಇಲ್ಲದಿರುವುದು.
- ಅನುದಾನದ ಕೊರತೆ ಇರುವುದು.
- ಎಲ್ಲಾ ನಿಗಮಗಳಲ್ಲಿ ಒಂದೇ ರೀತಿಯ ಯೋಜನೆಗಳಿರುವುದು.

**ಡಾ: ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ**

ನಿಗಮಕ್ಕೆ ನಿಗದಿಪಡಿಸಿದ ಅನುದಾನ, ಮಂಜೂರು ಮಾಡಿದ ಅನುದಾನ, ಬಿಡುಗಡೆಗೊಳಿಸಿದ ಅನುದಾನ, ಖರ್ಚು ಮಾಡಿದ ಅನುದಾನ, ಉಳಿಕೆಯಾದ ಅನುದಾನದ ವಿವರಗಳನ್ನು, ಈ

ಯೋಜನೆಗಳಿಗೆ ಆಧಾರ್ ಲಿಂಕ್ ಮಾಡುವ ಕುರಿತು, ನಿಗಮದ ಕೆಲವು ಪ್ರಮುಖ ಯೋಜನೆಗಳಿಗೆ ಫಲಾನುಭವಿಗಳು ಲಭ್ಯವಾಗುವ ಕುರಿತು ಹಾಗೂ ಬೋರ್‌ವೆಲ್ ಕೊರೆದ ನಂತರ ಮೋಟಾರ್ ಪಂಪ್‌ಸೆಟ್, ವಿದ್ಯುತ್ ಸಂಪರ್ಕ ಕಲ್ಪಿಸುವ ಕುರಿತು ಸಮಿತಿಯು ಇಲಾಖಾಧಿಕಾರಿಗಳಿಂದ ಮಾಹಿತಿಯನ್ನು ಬಯಸಿತು.

ಕಳೆದ 3 ವರ್ಷಗಳಲ್ಲಿ ನಿಗಮಕ್ಕೆ ಒಟ್ಟು 42,699 ಕೋಟಿ ಮಂಜೂರಾಗಿ, 41,949 ಕೋಟಿ ಬಿಡುಗಡೆಯಾಗಿ, 21,640 ಕೋಟಿಗಳನ್ನು ಖರ್ಚು ಮಾಡಿ, 20,308.78 ಕೋಟಿ ಉಳಿಕೆಯಾಗಿರುವುದಾಗಿ ಮತ್ತು 2020–21ರಲ್ಲಿ ಗಂಗಾ ಕಲ್ಯಾಣ ಯೋಜನೆಯ ಅನುದಾನ ಉಳಿಕೆಯಾಗಿ ಟೆಂಡರ್ ಪ್ರಕ್ರಿಯೆ ವಿಳಂಬವಾಗಿರುತ್ತದೆ. 2023–24ನೇ ಸಾಲಿಗೆ 307 ಕೋಟಿಗಳನ್ನು ನಿಗಮಕ್ಕೆ ನೀಡಲಾಗಿದೆ. ಪ್ರಸ್ತುತ ಡಿಬಿಟಿ ಸಿಸ್ಟಂ ಮೂಲಕ ಮಾಡಲಾಗುತ್ತಿದ್ದು, ಫಲಾನುಭವಿಗಳ ಆಧಾರ್‌ಗಳನ್ನು ಲಿಂಕ್ ಮಾಡಿ, ಹಣ ಅವರ ಖಾತೆಗಳಿಗೆ ನೇರವಾಗಿ ಜಮೆಯಾಗುತ್ತದೆ. ಪ್ರಸ್ತುತ 17 ಸಾವಿರದಲ್ಲಿ 8 ಸಾವಿರ ಜನ ಆಯ್ಕೆಯಾಗಿದ್ದು, ಉಳಿದ ಫಲಾನುಭವಿಗಳ ಆಯ್ಕೆ ಬಾಕಿ ಇರುತ್ತದೆ. ನಿಗಮದಲ್ಲಿ ಬೇಡ ಜಂಗಮ, ಛಲವಾದಿ, ಹೊಲೆಯ, ಹೊಲೆಯರ್ ಇತ್ಯಾದಿ ಜಾತಿಗಳಿಗೆ ಸೇರಿದವರು ಯೋಜನೆಗಳ ಪ್ರಯೋಜನೆಯನ್ನು ಪಡೆಯಬಹುದು. ಇತರೆ ಜಾತಿಗಳಿಗೆ ಸೇರಿದವರಾಗಿದ್ದರೆ, ಆಯಾ ನಿಗಮಗಳಿಗೆ ಕಳುಹಿಸಿಕೊಡಲಾಗುತ್ತದೆ.

ಕಳೆದ ವರ್ಷದಲ್ಲಿ ನಾಲ್ಕು ಚಕ್ರ ವಾಹನಕ್ಕಾಗಿ ಹಲವಾರು ಅರ್ಜಿಗಳು ಸಲ್ಲಿಸಿರುತ್ತಾರೆ. 2 ಲಕ್ಷ ಸಹಾಯಧನ ಯೋಜನೆಯಡಿ ಸಣ್ಣಮಟ್ಟ ವ್ಯಾಪಾರಸ್ಥರಿಗೆ ನೀಡುವುದು, ಭೂ ಒಡೆತನ ಯೋಜನೆಗಳಿಗೆ ಬಹಳಷ್ಟು ಬೇಡಿಕೆ ಇರುತ್ತದೆ. ಈ ಹಿಂದೆ ಅನುಮೋದನೆ ನೀಡಿರುವುದಕ್ಕೆ 40 ಕೋಟಿ, ಹಾಲಿ ಇರುವ 185 ಪ್ರಸ್ತಾವನೆಗಳಿಗೆ 75 ಕೋಟಿ, ಒಟ್ಟು 115 ಕೋಟಿಗಳು ಅಗತ್ಯವಿರುತ್ತದೆ ಎಂದು ಇಲಾಖಾಧಿಕಾರಿಗಳು ಸಮಿತಿಗೆ ವಿವರಿಸಿದರು.

**ಸಮಿತಿಯ ಪರಿಶೀಲನಾಂಶಗಳು,**

- ಕಳೆದ ಮೂರು ವರ್ಷಗಳಿಂದ ಪ್ರಗತಿಯ ಶೇಕಡಾವಾರು ಅತ್ಯಂತ ಕಡಿಮೆಯಾಗಿರುವುದು.
- ಕಳೆದ ಎರಡು ವರ್ಷಗಳಿಂದ ಅನುದಾನ ಬಳಕೆ ಮಾಡದೇ ಹಾಗೆಯೇ ಉಳಿಸಿರುವುದು.
- ಕೆಲವು ನಿಗಮಗಳಲ್ಲಿ ಫಲಾನುಭವಿಗಳ ಆಯ್ಕೆಯ ವಿಷಯಗಳಲ್ಲಿ ಮಧ್ಯವರ್ತಿಗಳ ಹಾವಳಿ ನಡೆಯುತ್ತಿರುವುದು.
- ಲಿಖಿತವಾಗಿ ಒದಗಿಸಿದ ಮಾಹಿತಿಯ ಪ್ರಕಾರ 300 ಕೋಟಿಗಳು ನಿಗಮದಲ್ಲಿ ಲಭ್ಯವಿರುವುದು.

## ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ

ನಿಗಮಕ್ಕೆ ಕಳೆದ ಮೂರು ವರ್ಷಗಳಲ್ಲಿ ಒದಗಿಸಿದ ಅನುದಾನ, ಮಂಜೂರಾದ ಅನುದಾನ, ವೆಚ್ಚ ಮಾಡಲಾದ ಅನುದಾನ, ಉಳಿಕೆಯಾದ ಅನುದಾನ, ಕ್ರಿಯಾ ಯೋಜನೆಗಳು, ಅದರಲ್ಲೂ ಗಂಗಾ ಕಲ್ಯಾಣ, ಭೂ ಒಡೆತನ ಯೋಜನೆ ಮತ್ತು ನೇಮಕಾತಿಗಳ ಕುರಿತು ಸಮಿತಿಯು ಇಲಾಖಾಧಿಕಾರಿಗಳಿಂದ ವಿವರಣೆ ಬಯಸಿತು.

- 2020–21ನೇ ಸಾಲಿನಲ್ಲಿ 236.90 ಕೋಟಿ ಮಂಜೂರಾಗಿದ್ದು, ಈ ಪೈಕಿ 195.90 ಕೋಟಿ ಬಿಡುಗಡೆಯಾಗಿ ಸಂಪೂರ್ಣವಾಗಿ ಯೋಜನೆಗಳಿಗೆ ವೆಚ್ಚ ಮಾಡಲಾಗಿರುತ್ತದೆ.
- 2021–22ನೇ ಸಾಲಿನಲ್ಲಿ 152 ಕೋಟಿಗಳು ಮಂಜೂರಾಗಿ, ಪೂರ್ತಿಯಾಗಿ ವೆಚ್ಚ ಮಾಡಲಾಗಿರುತ್ತದೆ.
- 2022–23ನೇ ಸಾಲಿನಲ್ಲಿ 329 ಕೋಟಿ ಮಂಜೂರಾಗಿದ್ದು, 259 ಕೋಟಿ ವೆಚ್ಚವಾಗಿ 70 ಕೋಟಿ ಅನುದಾನ ಉಳಿದಿರುತ್ತದೆ.

2021–22 ಮತ್ತು 2022–23ನೇ ಸಾಲಿನ ಗಂಗಾ ಕಲ್ಯಾಣ ಯೋಜನೆಯು ಡಿಬಿಡಿ ಮುಖಾಂತರ ಅನುಷ್ಠಾನಗೊಳಿಸಬೇಕಾಗಿರುವುದರಿಂದ ಆಯ್ಕೆ ಪ್ರಕ್ರಿಯೆಯು ಮುಗಿದಿರುತ್ತದೆ. ಸರ್ಕಾರದ ನಿರ್ಣಯದಂತೆ ಕಾರ್ಯಗತ ಮಾಡಬೇಕಾಗಿರುವುದರಿಂದ ಬಾಕಿ ಉಳಿದಿರುತ್ತದೆ. 2022–23ನೇ ಸಾಲಿನಲ್ಲಿ 175 ಕೋಟಿ ಅನುದಾನ ಮೀಸಲಿಡಲಾಗಿದೆ. 2019–20 ಮತ್ತು 2020–21ನೇ ಸಾಲಿನಲ್ಲಿ ಟರ್ನ್ ಕೀ ಮುಖಾಂತರ ಟೆಂಡರ್ ಮಾಡಿರುವುದರಿಂದ ಕೊರೆಯುವುದು ಮತ್ತು ಪಂಪ್ ಮೋಟಾರು ಅಳವಡಿಸಿಕೊಳ್ಳಲು ಅನುಕೂಲ ಮಾಡಿಕೊಡಲಾಗಿದ್ದು, ಆಯ್ಕೆಗೆ ಸಂಬಂಧಪಟ್ಟಂತೆ ನಿರ್ಣಯನ್ನು ಕೈಗೊಳ್ಳಬೇಕಾಗಿರುತ್ತದೆ.

ಇನ್ನು ಭೂ ಒಡೆತನ ಯೋಜನೆಗೆ ಸಂಬಂಧಿಸಿದಂತೆ, ಭೂಮಿ ಮಾರಿಕೊಳ್ಳಲು ಅವಕಾಶವಿರುವುದಿಲ್ಲ. ಮಹಿಳಾ ರೈತರ ಕುಟುಂಬದ ಸದಸ್ಯರ ಹೆಸರಿಗೆ ಭೂಮಿ ಕೊಡಲಾಗುತ್ತಿದೆ. ಮಂಜೂರಾದ ಭೂಮಿ ಬಗ್ಗೆ ಡಾ: ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮದವರು ಪರಿಶೀಲಿಸಿ, ನಿಗಮಗಳಿಗೆ ನೀಡಿದ ನಂತರ ಆಯಾ ನಿಗಮದವರು ಪರಿಶೀಲಿಸುತ್ತಿದ್ದಾರೆ. ಈ ಭೂ ಒಡೆತನ ಯೋಜನೆಯ ಫಲಾನುಭವಿಗಳು ಉಳುಮೆ ಮಾಡುತ್ತಿರುವ ಕುರಿತು ಪರಿಶೀಲಿಸಿದಾಗ, ಕೆಲವು ಪ್ರಕರಣಗಳಲ್ಲಿ ಇತರರು ಲೀಸ್‌ಗೆ ಮತ್ತು ಇತರರಿಗೆ ಉಳುಮೆ ಮಾಡಲು ತೆಗೆದುಕೊಂಡಿರುವುದಾಗಿ ಇಲಾಖೆಯ ಗಮನಕ್ಕೆ ಬಂದ ಹಿನ್ನಲೆಯಲ್ಲಿ ಭೂಮಿ ಮಂಜೂರಾದವರೇ ಉಳುಮೆ ಮಾಡಬೇಕೆಂದು ಸೂಚಿಸಲಾಗಿದೆ. ಇನ್ನು ನೇಮಕಾತಿಗೆ ಸಂಬಂಧಿಸಿದಂತೆ 2019–20ರಲ್ಲಿ ನೇಮಕಾತಿಯಾಗಿ 2021–22ನೇ ಸಾಲಿನಲ್ಲಿ 40 ತಾಲ್ಲೂಕು ಅಭಿವೃದ್ಧಿ ಅಧಿಕಾರಿಗಳನ್ನು ನೇಮಕ ಮಾಡಿಕೊಳ್ಳಲಾಗಿರುತ್ತದೆ.

Sc St Rep F. 4 SideB

**ಪರಿಶೀಲನಾಂಶಗಳು :**

- ಜಿಲ್ಲಾವಾರು ಭೂಮಿ ಮಂಜೂರಾದ, ಲೀಸ್‌ಗೆ ನೀಡಿರುವ ಭೂಮಿ ಬಗ್ಗೆ ಮಾಹಿತಿ ನೀಡಬೇಕು.
- ನಿಗಮದಲ್ಲಿ ಮಂಜೂರಾದ, ಮೀಸಲಿರಿಸಿದ, ವೆಚ್ಚ ಮಾಡಿ ಉಳಿಕೆಯಾದ ಅನುದಾನ ಹಾಗೂ ಮುಂದಿನ ಕ್ರಿಯಾ ಯೋಜನೆಗಳ ಕುರಿತು ಮಾಹಿತಿ ಒದಗಿಸಬೇಕು.

**ಕರ್ನಾಟಕ ತಾಂಡಾ ಅಭಿವೃದ್ಧಿ ನಿಗಮ**

ಈ ನಿಗಮವು 2009ರಲ್ಲಿ ಸ್ಥಾಪನೆಯಾಗಿದ್ದು, 2011ರಿಂದ ಸ್ವತಂತ್ರವಾಗಿ ಕಾರ್ಯ ನಿರ್ವಹಿಸುತ್ತಿದೆ. ಡಾ: ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮದಲ್ಲಿರುವ ಯೋಜನೆಗಳೇ ಇಲ್ಲಿಯೂ ಸಹ ಅನುಷ್ಠಾನಗೊಳಿಸಲಾಗುತ್ತಿದ್ದು, ಅನುದಾನ ವಿವರಗಳು ಈ ಕೆಳಕಂಡಂತೆ ಇರುತ್ತವೆ.

- 2020-21ರಲ್ಲಿ ಪ್ರಾರಂಭಿಕ ಶಿಲ್ಕು 95.36 ಕೋಟಿ, ಮಂಜೂರಾಗಿ ಬಿಡುಗಡೆಯಾದ ಮೊತ್ತ 30 ಕೋಟಿಗಳ ಪೈಕಿ 97.16 ಕೋಟಿ ಖರ್ಚು ಮಾಡಲಾಗಿದ್ದು, 28.20 ಕೋಟಿ ಉಳಿಕೆಯಾಗಿರುತ್ತದೆ.
- 2021-22ನೇ ಸಾಲಿನಲ್ಲಿ ಪ್ರಾರಂಭಿಕ ಶಿಲ್ಕು 28.20 ಕೋಟಿ, 20 ಕೋಟಿ ಮಂಜೂರಾಗಿ ಬಿಡುಗಡೆಯಾಗಿರುತ್ತದೆ. ಈ ಪೈಕಿ 45.86 ಕೋಟಿ ಖರ್ಚಾಗಿದ್ದು, 2.34 ಉಳಿಕೆಯಾಗಿರುತ್ತದೆ.
- 2022-23ನೇ ಸಾಲಿನಲ್ಲಿ 2.34 ಕೋಟಿಗಳು ಪ್ರಾರಂಭಿಕ ಶಿಲ್ಕು ಆಗಿದ್ದು, 72 ಕೋಟಿಗಳು ಮಂಜೂರಾಗಿ, 70.56 ಕೋಟಿ ಖರ್ಚು ಮಾಡಿ, 3.78 ಕೋಟಿ ಉಳಿಕೆಯಾಗಿರುತ್ತದೆ. ಉಳಿಕೆಯಾಗಿರುವ ಅನುದಾನವನ್ನು ಮುಂದಿನ ಸಾಲಿನಲ್ಲಿ ಪ್ರಾರಂಭಿಕ ಶಿಲ್ಕಾಗಿ ಸೇರಿಸಿಕೊಳ್ಳಲಾಗುತ್ತದೆ. ಎಸ್‌ಸಿಎಸ್‌ಪಿ/ಟಿಎಸ್‌ಪಿ ಅನುದಾನದಡಿಯಲ್ಲಿ ಈ ವರ್ಷ 60 ಕೋಟಿಗಳ ಅನುದಾನವನ್ನು ನೀಡಲಾಗಿದೆ.

ತಾಂಡಾಗಳಿಗೆ ಮೂಲಭೂತ ಸೌಕರ್ಯ ಯೋಜನೆಯಡಿಯಲ್ಲಿ ರಸ್ತೆ ನಿರ್ಮಾಣ, ಚರಂಡಿ ವ್ಯವಸ್ಥೆ, ಸಾಂಸ್ಕೃತಿಕ ಭವನಗಳ ನಿರ್ಮಾಣ, ಹೋಬಳಿ ಮತ್ತು ತಾಲ್ಲೂಕು ಮಟ್ಟದಲ್ಲಿ ಜಿಲ್ಲಾ ಮಂದಿರಗಳ ನಿರ್ಮಾಣ ಕಾಮಗಾರಿಗಳು ಕೈಗೊಳ್ಳಬೇಕಾಗಿರುವುದರಿಂದ ಸಿವಿಲ್ ಕಾರ್ಯಗಳನ್ನು ಇಇ ರವರು ನೋಡಿಕೊಳ್ಳುತ್ತಾರೆಂದು ಇಲಾಖಾಧಿಕಾರಿಗಳು ಸಮಿತಿಗೆ ವಿವರಿಸಿದರು.

**ಸಮಿತಿಯ ಪರಿಶೀಲನಾಂಶಗಳು :**

- ನಿಗಮದಡಿಯಲ್ಲಿ ರಾಜ್ಯದಲ್ಲಿ ಕ್ಷೇತ್ರವಾರು ಭೂ ಒಡೆತನ ಯೋಜನೆಯಡಿ ಫಲಾನುಭವಿಗಳ ವಿವರ, ಹೊರಗುತ್ತಿಗೆ ಆಧಾರದ ನೇಮಕಾತಿ ಮತ್ತು ಅಳವಡಿಸಿಕೊಂಡಿರುವ ಮೀಸಲಾತಿಯ ವಿವರಗಳನ್ನು ಒದಗಿಸುವುದು.

## ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮ

ನಿಗಮದ ಅನುದಾನ, ಯೋಜನೆಗಳು ಮತ್ತು ಅವುಗಳ ಅನುಷ್ಠಾನ, ಮ್ಯಾನ್ಯುಯಲ್ ಸಫಾಯಿ ಕರ್ಮಚಾರಿಗಳಿಗೆ ವಸತಿ ಸೌಕರ್ಯಗಳನ್ನು ಒದಗಿಸುವ ಕುರಿತು ಇಲಾಖೆಯು ಕೈಗೊಂಡ ಕ್ರಮಗಳು ಮತ್ತು ಇವರಿಗೆ ರೂಪಿಸಿಕೊಂಡಿರುವ ಹೊಸ ಯೋಜನೆ/ಕಾರ್ಯಕ್ರಮಗಳ ಮಾಹಿತಿಯನ್ನು ಸಮಿತಿಯು ಬಯಸಿತು.

ನಿಗಮದಿಂದ ರಾಜ್ಯದ ವಿವಿಧ ನಗರಪಾಲಿಕೆಗಳು, ಪುರಸಭೆಗಳಲ್ಲಿರುವ ಸುಮಾರು 7,493 ಮ್ಯಾನ್ಯುಯಲ್ ಸಫಾಯಿ ಕರ್ಮಚಾರಿಗಳನ್ನು ಗುರುತಿಸಿ, ಇವರಿಗೆ ಪುನರ್ವಸತಿ ಕಲ್ಪಿಸುವ ಯೋಜನೆಗಳನ್ನು ಕೈಗೊಳ್ಳಲಾಗುತ್ತಿದೆ. ಮ್ಯಾನ್ಯುಯಲ್ ಸ್ಕಾವೆಂಜರ್ಸ್ ಅನ್ನು ಬಳಸುವಂತಿಲ್ಲವೆಂದು ಸಾಕಷ್ಟು ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. 2013ರ ಅಧಿನಿಯಮದ ಪ್ರಕಾರ ಮ್ಯಾನ್ಯುಯಲ್ ಸ್ಕಾವೆಂಜರ್ಸ್‌ರವರನ್ನು ಉಪಯೋಗಿಸಿಕೊಂಡಲ್ಲಿ ಕ್ರಿಮಿನಲ್ ಮೊಕದ್ದಮೆ ದಾಖಲಾಗುತ್ತದೆ. ಡಾ: ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮದಲ್ಲಿರುವ ಯೋಜನೆಗಳೇ ಈ ನಿಗಮದಲ್ಲಿಯೂ ಸಹಾ ಇರುತ್ತವೆ. ಅನುದಾನದ ವಿವರಗಳು ಈ ಕೆಳಕಂಡಂತೆ ಇರುತ್ತವೆ.

- 2020–21ನೇ ಸಾಲಿನಲ್ಲಿ 10 ಕೋಟಿ ಮಂಜೂರಾದ ಪೈಕಿ 48.12 ಲಕ್ಷಗಳು ಖರ್ಚಾಗಿದ್ದು, 17.11 ಕೋಟಿ ಉಳಿಕೆಯಾಗಿರುತ್ತದೆ.
- 2021–22ನೇ ಸಾಲಿನಲ್ಲಿ 30 ಕೋಟಿ ಮಂಜೂರಾದ ಪೈಕಿ 42.97 ಕೋಟಿ ವೆಚ್ಚವಾಗಿ 4.14 ಕೋಟಿ ಉಳಿಕೆಯಾಗಿರುತ್ತದೆ.
- 2022–23ನೇ ಸಾಲಿನಲ್ಲಿ 55 ಕೋಟಿ ಮಂಜೂರಾದ ಪೈಕಿ 53.66 ಕೋಟಿ ವೆಚ್ಚವಾಗಿ 5.48 ಕೋಟಿ ಉಳಿಕೆಯಾಗಿರುತ್ತದೆ.

ಗಂಗಾ ಕಲ್ಯಾಣ, ಭೂ ಒಡೆತನದಂತಹ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದ್ದು, ಇವರಿಗೆ ಎಲ್ಲಾ ಮುಂಜಾಗ್ರತಾ ಪರಿಕರಗಳನ್ನು ಒದಗಿಸಲಾಗುತ್ತಿದೆ. ನಗರಾಭಿವೃದ್ಧಿ ಇಲಾಖೆಯಿಂದ ಅನುಷ್ಠಾನಗೊಳಿಸುವ ಯೋಜನೆಗಳಡಿಯಲ್ಲಿ ಮನೆಗಳನ್ನು ನಿರ್ಮಿಸಬಹುದಾಗಿರುತ್ತದೆ. ನಿಗಮದಿಂದ ಸಫಾಯಿ ಕರ್ಮಚಾರಿಗಳಿಗೆ ಮನೆಗಳನ್ನು ನಿರ್ಮಿಸಲು ಸಾಧ್ಯವಾಗಿರುವುದಿಲ್ಲ. ಇವರ ಮಕ್ಕಳಿಗೆ ಶಿಕ್ಷಣದಲ್ಲಿ ಮೀಸಲಾತಿ ಒದಗಿಸಿದ್ದು, ಮೊರಾರ್ಜಿ ದೇಸಾಯಿ ವಸತಿ ಶಾಲೆಗಳಲ್ಲಿ ಪರೀಕ್ಷೆ ಇಲ್ಲದೇ ನೇರವಾಗಿ ನೋಂದಾಯಿಸಿಕೊಳ್ಳಲು ವ್ಯವಸ್ಥೆ ಮಾಡಲಾಗಿರುತ್ತದೆ ಎಂದು ಇಲಾಖಾಧಿಕಾರಿಗಳು ಸಮಿತಿಗೆ ವಿವರಣೆ ನೀಡಿದರು.

**ಸಮಿತಿಯ ಪರಿಶೀಲನಾಂಶಗಳು :**

- ಸಮಾಜದಲ್ಲಿ ಅತ್ಯಂತ ಕೆಳಮಟ್ಟದ ಕೆಲಸವನ್ನು ಮಾಡುವ ಇವರ ಜೀವನ ಸುಧಾರಣೆಯಾಗಲು ಹೊಸ ರೀತಿಯ ಯೋಜನೆಗಳನ್ನು ರೂಪಿಸದಿರುವುದು.
- ಎಸ್‌ಸಿಎಸ್‌ಪಿ/ಟಿಎಸ್‌ಪಿ ಅನುದಾನವನ್ನು ಒದಗಿಸುವುದರ ಮೂಲಕ ಹೊಸ ಕ್ರಿಯಾ ಯೋಜನೆಗಳನ್ನು ರೂಪಿಸದಿರುವುದು.
- ಬೆಂಗಳೂರು ಮತ್ತು ಇತರೆ ಜಿಲ್ಲೆಗಳಲ್ಲಿರುವ ಸಫಾಯಿ ಕರ್ಮಚಾರಿಗಳ ಒಟ್ಟು ಜನಸಂಖ್ಯೆ ವಿವರಗಳನ್ನು ಪಡೆಯುವುದು.
- ಇವರಿಗೆ ಪುನರ್ವಸತಿ ಕಲ್ಪಿಸುವ ದೃಷ್ಟಿಯಿಂದ ನಗರಾಭಿವೃದ್ಧಿ ಇಲಾಖೆಯೊಂದಿಗೆ ಚರ್ಚಿಸುವುದು.

## ಡಾ: ಬಾಬು ಜಗಜೀವನ ರಾಮ್ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮ:

ನಿಗಮದಡಿ ಮಾದಿಗರು, ಮೋಚಿಗರು ಎಂಬ ಚರ್ಮ ಉದ್ಯಮದಲ್ಲಿ ತೊಡಗಿರುವ 50,000 ಕುಟುಂಬಗಳನ್ನು ಗುರುತಿಸಿದ್ದು, ಇವರಿಗೆ ವಿವಿಧ ರೀತಿಯ ಚರ್ಮ ಉತ್ಪನ್ನಗಳನ್ನು ತಯಾರು ಮಾಡುವಂತಹ ತರಬೇತಿಗಳನ್ನು ಹಾಗೂ ವಸತಿ ಯೋಜನೆಗಳನ್ನು ಕೈಗೊಳ್ಳುತ್ತಿದ್ದು, ಪ್ರಸಕ್ತ ಸಾಲಿನಲ್ಲಿ 35 ಕೋಟಿಗಳ ಅನುದಾನ ನಿಗದಿಯಾಗಿರುತ್ತದೆ. ರಾಜ್ಯಾದ್ಯಂತ ನಿಗಮದ 14 ಮಳಿಗೆಗಳು ಇದ್ದು, ಇದರಿಂದಲೂ ಸಹಾ ಆದಾಯ ಬರುತ್ತದೆ. ಈ ಹಿಂದೆ ನಿಗಮದ ಉತ್ಪದನಾ ಯೂನಿಟ್ ಇದ್ದು, ಪ್ರಸ್ತುತ ಅದನ್ನು ಮುಚ್ಚಲಾಗಿರುತ್ತದೆ. ಪ್ರಸ್ತುತ ಚರ್ಮ ಉತ್ಪಾದಕರಿಂದ ನಿಗಮವು ತೆಗೆದುಕೊಳ್ಳುತ್ತಿದೆ. ಈ ಪೈಕಿ ಬೆಂಗಳೂರು, ಮೈಸೂರು ತುಮಕೂರು ಮತ್ತು ಶಿವಮೊಗ್ಗದಲ್ಲಿ ಚರ್ಮ ಉತ್ಪಾದನೆಗಳನ್ನು ತಯಾರು ಮಾಡುತ್ತಿರುವ 17 ಫ್ಯಾಕ್ಟರಿಗಳನ್ನು ಸೇರಿಸಿಕೊಳ್ಳಲಾಗಿದೆ ಎಂದು ಇಲಾಖಾಧಿಕಾರಿಗಳು ಸಮಿತಿಗೆ ನಿಗಮದ ಕುರಿತು ಮಾಹಿತಿ ಒದಗಿಸಿದರು.

ಇಲಾಖಾಧಿಕಾರಿಗಳ ಮಾಹಿತಿಯನ್ನು ಆಲಿಸಿದ ಸಮಿತಿಯು ಲಿಖಿತವಾಗಿ ಒದಗಿಸಿರುವ ಮಾಹಿತಿಯಲ್ಲಿ 35 ಕೋಟಿ 80 ಲಕ್ಷ ರೂಪಾಯಿಗಳಿಗೆ ರೂಪಿಸಿಕೊಂಡಿರುವ ಕ್ರಿಯಾ ಯೋಜನೆ ಕುರಿತು ಮಾಹಿತಿ ನೀಡುವಂತೆ ಸಮಿತಿಯು ಇಲಾಖಾಧಿಕಾರಿಗಳಿಗೆ ತಿಳಿಸಿದರು.

ಕ್ರಿಯಾ ಯೋಜನೆಗೆ ಸಂಬಂಧಿಸಿದಂತೆ, ನಿಗಮದ ಬೋರ್ಡ್ ಮೀಟಿಂಗ್‌ನ ಮುಂದೆ ಮಂಡಿಸಲಾಗಿರುತ್ತದೆ ಎಂದು ಇಲಾಖಾಧಿಕಾರಿಗಳು ಸಮಿತಿಗೆ ವಿವರಿಸಿದರು.

ಸಮಿತಿಯ ಪರಿಶೀಲನಾಂಶಗಳು :

- ನಿಗಮದಿಂದ ಚರ್ಮ ಉತ್ಪನ್ನಗಳನ್ನು ಮಾಡುತ್ತಿರುವ ಈ 17 ಫಾಕ್ಟರಿಗಳಿಗೆ ಉತ್ಪಾದನೆಯ ಆದೇಶವನ್ನು ನೀಡಿ, ಅಂತ್ಯದಲ್ಲಿ ಉತ್ಪನ್ನಗಳು ಮಾರಾಟವಾಗಿಲ್ಲವೆಂದು ನಿಗಮದಲ್ಲಿಯೇ ಮಾರಾಟ ಮಾಡುತ್ತಿರುವುದು.
- ನಿಗಮದಲ್ಲಿ ಉತ್ಪಾದನೆಗೆ ಸಂಬಂಧಿಸಿದಂತೆ ಸಲಹೆಗಾರರನ್ನು ನೇಮಿಸಿಕೊಂಡಿದ್ದು, ವರ್ಷಕ್ಕೆ ಒಂದು ಕೋಟಿಯನ್ನು ಅವರಿಗೆ ನೀಡಲಾಗುತ್ತಿರುವುದು.
- ನಿಗಮದ ಮಳಿಗೆಗಳಲ್ಲಿ ಗ್ರಾಹಕರನ್ನು ನೋಡಿಕೊಳ್ಳುವ ರೀತಿ ಬಹಳ ಶೋಚನೀಯ ವಾಗಿರುವುದು.
- ಈ ಮಳಿಗೆಗಳಲ್ಲಿ ಗ್ರಾಹಕರನ್ನು ಹಿಡಿದಿಟ್ಟುಕೊಳ್ಳುವ ಬಗ್ಗೆ ಸರಿಯಾದ ತರಬೇತಿ ಇಲ್ಲದಿರುವುದು.

## ಪರೀಕ್ಷಾ ಪೂರ್ವ ತರಬೇತಿ ಕೇಂದ್ರ

**ಕೇಂದ್ರದ ಮುಖ್ಯ ಉದ್ದೇಶಗಳು :**

- ಪಜಾ/ಪಪಂ ಮಕ್ಕಳಿಗೆ ವಿವಿಧ ಪರೀಕ್ಷೆಗಳಿಗೆ ಕೇಂದ್ರದಿಂದ ತರಬೇತಿ ನೀಡಲಾಗುವುದು.
- ಭಾ.ಆ.ಸೇ., ಕ.ಆ.ಸೇ.,ಗೆ ಒಂದು ರೀತಿಯ ತರಬೇತಿ ಇರುತ್ತದೆ.
- ಎಸ್.ಎಸ್.ಸಿ., ಆರ್.ಆರ್.ಬಿ. ಮತ್ತು ಬ್ಯಾಂಕಿಂಗ್ ಪರೀಕ್ಷೆಗಳಿಗೆ ಒಂದು ರೀತಿಯ ತರಬೇತಿ ಬೇರೆ ಬೇರೆ ಪರೀಕ್ಷೆಗಳಿಗೆ ಮಕ್ಕಳಿಗೆ ತರಬೇತಿಗಳನ್ನು ನೀಡಲಾಗುತ್ತಿದೆ.

ಭಾ.ಆ.ಸೇ., ಪರೀಕ್ಷೆಗಳಿಗೆ ದೆಹಲಿ ಮತ್ತು ಹೈದರಾಬಾದ್‌ನಲ್ಲಿರುವ ಪ್ರತಿಷ್ಠಿತ ಸಂಸ್ಥೆಗಳೊಂದಿಗೆ ಒಡಬಂಡಿಕೆ ಮಾಡಿಕೊಂಡು ಮಕ್ಕಳನ್ನು ಅಲ್ಲಿಗೆ ಕಳುಹಿಸಿ ತರಬೇತಿ ಕೊಡಿಸಲಾಗುತ್ತಿದೆ. 7–8 ತಿಂಗಳು ಅಲ್ಲಿಯೇ ತರಬೇತಿಯನ್ನು ಪಡೆಯುವವರಿಗೆ ಎಲ್ಲಾ ವೆಚ್ಚಗಳನ್ನು ತರಬೇತಿ ಕೇಂದ್ರದಿಂದಲೇ ಭರಿಸಲಾಗುತ್ತಿದೆ. ಪ್ರಸ್ತುತ 23 ಜನರು ಯುಪಿಎಸ್‌ಸಿ ಮತ್ತು 53 ಅಭ್ಯರ್ಥಿಗಳು ಕೆಪಿಎಸ್‌ಸಿ ತೇರ್ಗಡೆಯಾಗಿರುತ್ತಾರೆ.

ಪ್ರಬುದ್ಧ ಯೋಜನೆಯಡಿಲ್ಲಿ ಪದವಿಯ ನಂತರ ಗ್ಲೋಬಲ್ ರ್‍ಯಾಂಕಿಂಗ್ 500 ಒಳಗಿರುವ ವಿಶ್ವವಿದ್ಯಾಲಯಗಳಲ್ಲಿ ಪಿ.ಜಿ.ಗಳನ್ನು ವಿದೇಶಗಳಲ್ಲಿ ವಿದ್ಯಾಭ್ಯಾಸ ಮಾಡುವ ವಿದ್ಯಾರ್ಥಿಗಳಿಗೆ 8 ಲಕ್ಷ ಆದಾಯ ಮಿತಿ ಇರುವವರಿಗೆ ಪೂರ್ತಿ ಸಹಾಯಧನ, 8–15 ಲಕ್ಷ ಆದಾಯ ಮಿತಿ ಇರುವವರಿಗೆ ಶೇ. 50% ಸಹಾಯಧನ, 15–25 ಲಕ್ಷ ಆದಾಯಮಿತಿ ಇರುವವರಿಗೆ ಶೇ. 33% ಸಹಾಯಧನ

ನೀಡಲಾಗುವುದು. ಪ್ರಸ್ತುತ ಬೆಂಗಳೂರಿನ ಮಾಗಡಿ ರಸ್ತೆಯಲ್ಲಿ ಡಾ: ಬಾಬು ಜಗಜೀವನ ರಾಮ್ ಸಂಶೋಧನಾ ಸಂಸ್ಥೆಯಲ್ಲಿ ದೊಡ್ಡ ಭವನ 108 ಕೋಟಿ ಖರ್ಚುಮಾಡಿ ನಿರ್ಮಿಸಲಾಗಿದ್ದು, ಅಲ್ಲಿಯೇ ತರಬೇತಿ ತರಗತಿಗಳನ್ನು ನಡೆಸಲಾಗುತ್ತಿದೆ. ಕಲಬುರಗಿಯಲ್ಲಿಯೂ ಸಹಾ ಒಂದು ಸಂಸ್ಥೆ ಇರುತ್ತದೆ.

2020-21ರಲ್ಲಿ ಕರೋನಾ ಬಂದಿದ್ದರಿಂದ 10 ಕೋಟಿ ನಿಗದಿಯಾಗಿ 04 ಕೋಟಿ ಮಾತ್ರ ಬಿಡುಗಡೆಯಾಗಿ ಪೂರ್ತಿ ಖರ್ಚಾಗಿರುತ್ತದೆ. ಪ್ರತಿ ವರ್ಷ ಸುಮಾರು 50 ಕೋಟಿಗಳು ಅನುದಾನ ಇರುತ್ತದೆ ಎಂದು ಇಲಾಖಾಧಿಕಾರಿಗಳು ಸಮಿತಿಗೆ ವಿವರಿಸಿದರು.

**ಪರಿಶೀಲನಾಂಶಗಳು :**

- ಕಲಬುರಗಿಯಲ್ಲಿ ಮತ್ತು ಬೆಂಗಳೂರಿನಲ್ಲಿ ಮಾತ್ರ ತರಬೇತಿ ಸಂಸ್ಥೆಗಳಿದ್ದು, ಇತರೆ ಜಿಲ್ಲೆಗಳಲ್ಲಿ ಇಲ್ಲದಿರುವುದು.
- ಮಹಾರಾಷ್ಟ್ರದ ಪುಣೆಯಲ್ಲಿರುವ ಸಂಸ್ಥೆಯಲ್ಲಿ ಪ್ರತಿ ವರ್ಷ ಗರಿಷ್ಠ ಫಲಿತಾಂಶ ಬರುತ್ತಿದ್ದು, ರಾಜ್ಯದಲ್ಲಿ ಇದೇ ಮಾದರಿ ಅಳವಡಿಸದಿರುವುದು.

**ಪರಿಶೀಲನಾಂಶಗಳ ಆಧಾರದ ಮೇಲೆ ಸಮಿತಿಯ ಶಿಫಾರಸ್ಸುಗಳು :**

**ಸಮಿತಿಯು ಸಮಾಜ ಕಲ್ಯಾಣ ಇಲಾಖೆಯನ್ನು ಪರಿಶೀಲನೆ ಮಾಡಿದಾಗ ಸಾಕಷ್ಟು ಬೇಡಿಕೆಗಳು, ವಿದ್ಯಾರ್ಥಿಗಳಿಗೆ ಮೂಲಭೂತ ಸೌಕರ್ಯಗಳ ಕೊರತೆ, ಶಿಕ್ಷಣ ಕೇಂದ್ರಗಳಲ್ಲಿರುವ ನ್ಯೂನತೆಗಳನ್ನು ಸರಿಪಡಿಸಲು ಅನುದಾನದ ಕೊರತೆಯನ್ನು ಸಮಿತಿಯು ಗಮನಿಸಿ, ಈ ವರ್ಗದ ಜನರಿಗೆ ನೇರವಾಗಿ ಸವಲತ್ತುಗಳು, ಆರ್ಥಿಕವಾಗಿ, ಶೈಕ್ಷಣಿಕವಾಗಿ, ಔದ್ಯೋಗಿಕವಾಗಿ ಬದಲಾವಣೆಯಾಗಬೇಕಾಗಿರುವುದು ಅತ್ಯಗತ್ಯವಾಗಿರುವ ಹಿನ್ನಲೆಯಲ್ಲಿ ಸಮಿತಿಯ ಪ್ರಮುಖ ಅಂಶಗಳು ಮತ್ತು ಶಿಫಾರಸ್ಸುಗಳು :-**

1. **ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಯಡಿಯಲ್ಲಿರುವ ಶಾಲಾ/ಕಾಲೇಜುಗಳಲ್ಲಿ ಕಳೆದ 5 ವರ್ಷಗಳಲ್ಲಿ 92 ಆತ್ಮಹತ್ಯೆ ಪ್ರಕರಣಗಳಿಗೆ ಸಂಬಂಧಿಸಿದಂತೆ ನಾಗರಿಕ ಹಕ್ಕು ನಿರ್ದೇಶನಾಲಯದಿಂದ ಸಮಗ್ರವಾಗಿ ತನಿಖೆಯಾಗಿದೆಯೇ ಅಥವಾ ಇಲ್ಲವೇ ಎಂದು ಪೋಷಕರಿಂದ ಅಭಿಪ್ರಾಯ ಸಂಗ್ರಹಿಸಿ, ಕಾನೂನಿನ ರೀತ್ಯಾ ಶೀಘ್ರ ಕ್ರಮ ವಹಿಸುವಂತೆ ಹಾಗೂ ಮಕ್ಕಳಿಗೆ, ಪೋಷಕರಿಗೆ ಮತ್ತು ಶಿಕ್ಷಕರಿಗೆ ಇಲಾಖಾ ಹಂತದಲ್ಲಿ ಕೌನ್ಸಿಲಿಂಗ್ ಮಾಡಿಸಬೇಕೆಂದು ಸಮಿತಿಯು ಸೂಚಿಸುತ್ತದೆ.**

2. ಸಂಸ್ಥೆಯವರು ಇನ್ನು ಮುಂದೆ ಹೊಸ ಕಟ್ಟಡಗಳನ್ನು ನಿರ್ಮಾಣ ಮಾಡುವ ಮೊದಲೇ ಅಗತ್ಯವಿರುವ ಶಿಕ್ಷಕರು ಹಾಗೂ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಕಡ್ಡಾಯವಾಗಿ ಅಂದಾಜು ಪಟ್ಟಿ ತಯಾರಿಸಿ, ಅನುಮೋದನೆ ಪಡೆದುಕೊಳ್ಳಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.

3. ಸಮಿತಿಯು ವಸತಿ ಶಾಲೆಗಳಲ್ಲಿ ಪೂರೈಕೆಯಾಗುವ ಆಹಾರ ಪದಾರ್ಥಗಳ ಬಗ್ಗೆ ಚರ್ಚಿಸಿ ಆಹಾರ ಪದಾರ್ಥಗಳ ಸರಬರಾಜಿಗಾಗಿ ಟೆಂಡರ್ ಆಹ್ವಾನಿಸಿದ ನಂತರ ಯಾವ ಮಾದರಿಯ ಆಹಾರ ಪದಾರ್ಥಗಳನ್ನು ಸರಬರಾಜು ಮಾಡಲು ಕಾರ್ಯಾದೇಶ ನೀಡಲಾಗಿರುತ್ತದೆಯೋ ಅದೇ ಮಾದರಿಯ ಆಹಾರ ಪದಾರ್ಥಗಳು ಸರಬರಾಜು ಆಗುತ್ತಿದೆಯೇ ಎಂಬುದಕ್ಕೆ ಪರಿಶೀಲನೆಗಾಗಿ ಸಂಬಂಧಪಟ್ಟ ವಸತಿ ಶಾಲೆಗಳಲ್ಲಿ ಕಡ್ಡಾಯವಾಗಿ ಇರಿಸತಕ್ಕದ್ದು ಹಾಗೂ ಈ ಕುರಿತು ಇಲಾಖಾ ವತಿಯಿಂದ ಮಾರ್ಗಸೂಚಿ ಹೊರಡಿಸುವುದು ಮತ್ತು ಆಹಾರ ಪದಾರ್ಥಗಳ ಗುಣಮಟ್ಟ ಮತ್ತು ಪ್ರಮಾಣ ಪರೀಕ್ಷಿಸಲು ಜಿಲ್ಲಾ ಮಟ್ಟದಲ್ಲಿ ಹಿರಿಯ ಅಧಿಕಾರಿಯವರಿಗೆ ಜವಾಬ್ದಾರಿ ವಹಿಸಬೇಕೆಂದು ಸಮಿತಿಯು ಸೂಚಿಸಿತು.

4. ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಯ ವಸತಿ ಶಾಲೆಗಳ ಹೊಸ ಕಟ್ಟಡಗಳ ನಿರ್ಮಾಣವನ್ನು ಲೋಕೋಪಯೋಗಿ, ಪಿಆರ್ಇಡಿ, ನಂತಹ ಸರ್ಕಾರಿ ಇಲಾಖೆಗಳಲ್ಲಿ ತಾಂತ್ರಿಕ ತಜ್ಞರುಗಳಿರುವುದರಿಂದ ಇವರಿಗೆ ವಹಿಸಿ ನಿರ್ಮಿಸಬೇಕೆಂದು ಮತ್ತು ಅಗತ್ಯವಿರುವ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಅಂದಾಜುಪಟ್ಟಿಯಲ್ಲಿ ಕಡ್ಡಾಯವಾಗಿ ಸೇರಿಸಿಕೊಂಡು ಅನುಮತಿ ಪಡೆದುಕೊಂಡ ನಂತರವೇ ವಸತಿ ಶಾಲೆಗಳನ್ನು ನಿರ್ಮಾಣ ಮಾಡಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.

5. ಕ್ರೈಸ್ ಸಂಸ್ಥೆಯಲ್ಲಿ ಇಂಜಿನಿಯರ್‌ಗಳ ಕೊರತೆಯಿದ್ದರೂ ಸಹಾ ಸಾವಿರಾರು ಕೋಟಿಗಳ ಕಾಮಗಾರಿಗಳನ್ನು ಕೈಗೊಂಡಿರುವುದಕ್ಕೆ ಸಮಿತಿಯು ತೀವ್ರವಾಗಿ ಅಸಮದಾನವನ್ನು ವ್ಯಕ್ತಪಡಿಸಿ, ಈ ಸಂಸ್ಥೆಗೆ ಶಾಶ್ವತವಾದ ಇಂಜಿನಿಯರಿಂಗ್ ವಿಭಾಗ ಮಾಡಿಕೊಂಡು, ನಿಯೋಜನೆ ಅಥವಾ ಖಾಯಂ ಆಗಿ ನೇಮಕಮಾಡಿಕೊಳ್ಳಲು ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕೆಂದು ಸಮಿತಿಯು ಸೂಚಿಸುತ್ತದೆ.

6. ಬಾಡಿಗೆ ಕಟ್ಟಡಗಳಲ್ಲಿ ನಡೆಯುತ್ತಿರುವ ವಸತಿ ಶಾಲೆಗಳ ಹಾಸ್ಟೆಲ್‌ಗಳ ಜಾಗಕ್ಕಾಗಿ ಸಂಬಂಧಿಸಿದ ಸ್ಥಳೀಯ ಶಾಸಕರ ಗಮನಕ್ಕೆ ತಂದು, ಸ್ವಂತ ಕಟ್ಟಡ ನಿರ್ಮಾಣಕ್ಕಾಗಿ ಸರ್ಕಾರಿ ಜಾಗವನ್ನು ದೊರಕಿಸಿಕೊಡುವಂತೆ ಕೋರಲು ಸಮಿತಿಯು ಸೂಚಿಸುತ್ತದೆ.

7. ಕಲ್ಯಾಣ ಕರ್ನಾಟಕ ಭಾಗಕ್ಕೆ ವಿಶೇಷ ಅನುದಾನ ನೀಡಿದ್ದಾರೆಂದು ಪರಿಗಣಿಸಿ, ರಾಜ್ಯ ಮಟ್ಟದಲ್ಲಿ ನೀಡುವ ಅನುದಾನವನ್ನು ರದ್ದುಪಡಿಸದೇ, ಎರಡನ್ನು ಪ್ರತ್ಯೇಕವಾಗಿ ನೀಡುವುದರ ಮೂಲಕ ದಾ:

Sc St Rep F. 5 SideA

ನಂಜುಂಡಪ್ಪ ವರದಿಯ ಪ್ರಕಾರ ಈ ಭಾಗದಲ್ಲಿ ಸಮಾಜ ಕಲ್ಯಾಣ ಇಲಾಖೆಯಡಿ ಪಜಾ/ಪಪಂ ಮಕ್ಕಳಿಗೆ ಶಿಕ್ಷಣದ ಜೊತೆಗೆ ವಿದ್ಯಾರ್ಥಿನಿಲಯಗಳನ್ನು ನೀಡಬೇಕೆಂದು ಹಾಗೂ ಅವುಗಳಿಗೆ ಮೂಲಭೂತ ಸೌಲಭ್ಯಗಳನ್ನು ಒದಗಿಸಲು ಪ್ರಥಮ ಆದ್ಯತೆಯಲ್ಲಿ ಕ್ರಮ ಕೈಗೊಳ್ಳಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.

8. ಕಲ್ಯಾಣ ಕರ್ನಾಟಕ ಭಾಗದ ಜಿಲ್ಲೆಗಳಲ್ಲಿ ಸಂಪೂರ್ಣವಾಗಿ ಬಳಕೆ ಮಾಡದೇ ಮುಂದುವರೆಸಿಕೊಂಡು ಹೋಗುತ್ತಿರುವ ಎಸ್‌ಸಿಎಸ್‌ಪಿ/ಟಿಎಸ್‌ಪಿ ಅನುದಾನವನ್ನು ಇದೇ ಭಾಗದಲ್ಲಿ ಸಮಾಜ ಕಲ್ಯಾಣ ಇಲಾಖೆಯಡಿ ಮಕ್ಕಳ ಶಿಕ್ಷಣಕ್ಕೆ ಹಾಗೂ ಮೂಲಭೂತ ಸೌಲಭ್ಯಗಳಿಗೆ ಬಳಸಿಕೊಳ್ಳಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.

9. ರಾಜ್ಯದ ಎಲ್ಲಾ ವಿದ್ಯಾರ್ಥಿನಿಲಯಗಳಲ್ಲಿ ಮಂಜೂರಾತಿಗಿಂತ ಹೆಚ್ಚು ವಿದ್ಯಾರ್ಥಿಗಳು ದಾಖಲಾಗುತ್ತಿರುವುದರಿಂದ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ನೀಡುತ್ತಿರುವ ವಿದ್ಯಾಸಿರಿ ಯೋಜನೆಯ ರೀತ್ಯಾ ಹಾಸ್ಟೆಲ್‌ಗಳಲ್ಲಿ ವಸತಿ ಲಭ್ಯವಿಲ್ಲದಿರುವ ಪಜಾ/ಪಪಂ ವಿದ್ಯಾರ್ಥಿಗಳಿಗೂ ಸಹಾ ಪ್ರತಿ ತಿಂಗಳಿಗೆ ರೂ. 3,000/-ರಂತೆ ನೀಡಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.

10. ವಿದ್ಯಾರ್ಥಿನಿಯರ ಸುರಕ್ಷತೆಯ ದೃಷ್ಟಿಯಿಂದ ಹಾಸ್ಟೆಲ್‌ಗಳಲ್ಲಿ ಕಡ್ಡಾಯವಾಗಿ ಮಹಿಳಾ ವಾರ್ಡನ್‌ಗಳನ್ನು ಮತ್ತು ರಾತ್ರಿ ವೇಳೆಯಲ್ಲಿ ಹೆಣ್ಣು ಮಕ್ಕಳ ಸುರಕ್ಷತೆ ದೃಷ್ಟಿಯಿಂದ ಪ್ರತಿ ವಸತಿ ನಿಲಯಗಳಲ್ಲಿ ಒಬ್ಬರಂತೆ ಮಹಿಳಾ ಹೋಂಗಾರ್ಡ್‌ಗಳನ್ನು ನೇಮಕ ಮಾಡಿಕೊಳ್ಳಬೇಕೆಂದು ಶಿಫಾರಸ್ಸು ಮಾಡುತ್ತದೆ.

11. ಪ.ಜಾ/ಪ.ಪಂ. ಬಡ ವಿದ್ಯಾರ್ಥಿಗಳಿಗೆ ಉತ್ತಮ ಶಿಕ್ಷಣ ಮತ್ತು ಹಾಸ್ಟೆಲ್‌ಗಳಿಗೆ ಮೂಲಭೂತ ಸೌಕರ್ಯಗಳನ್ನು ನೀಡಿದಲ್ಲಿ ತಮ್ಮ ಜೀವನವನ್ನು ರೂಪಿಸಿಕೊಂಡು ಸಮಾಜದ ಮುಖ್ಯವಾಹಿನಿಗೆ ಬರುವ ಸಾಧ್ಯತೆಗಳಿರುವುದರಿಂದ ಅಗತ್ಯವಿರುವ ಅನುದಾನವನ್ನು, ವಿದ್ಯಾರ್ಥಿ ವೇತನವನ್ನು ಬಿಡುಗಡೆ ಮಾಡಬೇಕೆಂದು ಹಾಗೂ ಹಾಲಿ ಇರುವ ಮಾರ್ಗಸೂಚಿಗಳ ಪ್ರಕಾರ ವಿದ್ಯಾರ್ಥಿ ವೇತನವನ್ನು ನೇರವಾಗಿ ಮಕ್ಕಳ ಖಾತೆಗೆ ಜಮಾ ಮಾಡುತ್ತಿರುವುದರಿಂದ ಹಲವಾರು ವಿದ್ಯಾರ್ಥಿಗಳು ಶಿಕ್ಷಣ ಸಂಸ್ಥೆಗಳಿಗೆ ಪಾವತಿಸುತ್ತಿಲ್ಲವಾದ್ದರಿಂದ ಕೇಂದ್ರ ಸರ್ಕಾರದೊಂದಿಗೆ ಸಮಾಲೋಚಿಸಿ, ಕೇಂದ್ರ ಸರ್ಕಾರದಿಂದ ನೇರವಾಗಿ ಶಿಕ್ಷಣ ಸಂಸ್ಥೆಗಳಿಗೆ ಪಾವತಿಸಲು ಅಗತ್ಯ ಕ್ರಮವಹಿಸಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.

Sc St Rep F: 5 SideA

12. ಸಫಾಯಿ ಕರ್ಮಚಾರಿ ಕೆಲಸವನ್ನು ಹೊರತುಪಡಿಸಿ ಇತರೆ ಕೆಲಸಗಳನ್ನು ಮಾಡಲು ನಗರಸಭೆ, ಪುರಸಭೆ, ಮಹಾನಗರ ಪಾಲಿಕೆಗಳಲ್ಲಿ ಉದ್ಯೋಗದಲ್ಲಿ ಬಳಕೆ ಮಾಡಿಕೊಳ್ಳುವಂತೆ ನಗರಾಭಿವೃದ್ಧಿ ಇಲಾಖೆಯೊಂದಿಗೆ ಚರ್ಚಿಸಿ ಸೂಕ್ತ ಕ್ರಮ ಕೈಗೊಳ್ಳಲು ಸಮಿತಿಯು ಸೂಚಿಸುತ್ತದೆ.

13. ಸಫಾಯಿ ಕರ್ಮಚಾರಿ ಕೆಲಸವನ್ನು ಹಾಲಿ ಇರುವ ಸೂಚನೆಗಳ ರೀತ್ಯಾ ಯಂತ್ರೋಪಕರಣಗಳನ್ನು ಬಳಸಿಕೊಂಡು ಕೆಲಸ ಮಾಡಿಸಿಕೊಳ್ಳದೇ, ಮ್ಯಾನ್ಯುಯೆಲ್ ಆಗಿ ಕೆಲಸ ಮಾಡಿಸಿಕೊಂಡಲ್ಲಿ ಅಂತಹವರ ವಿರುದ್ಧ ಕಾನೂನು ರೀತ್ಯಾ ಕಠಿಣ ಕ್ರಮಗಳನ್ನು ಕೈಗೊಳ್ಳಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.

14. ಕ್ರೈಸ್ ಸಂಸ್ಥೆಯ ಶಾಲೆಗಳಲ್ಲಿ ವಿದ್ಯಾಭ್ಯಾಸ ಮಾಡುವ ಮಕ್ಕಳಿಗೆ ಶೂ ಮತ್ತು ಸಾಕ್ಸ್‌ಗೆ 4ಜಿ ವಿನಾಯಿತಿ ಪಡೆಯುತ್ತಿರುವ ರೀತಿಯಲ್ಲಿ ಎಲ್ಲಾ ವಸತಿ ನಿಲಯಗಳಿಗೆ, ಶಾಲೆಗಳಿಗೆ ಮತ್ತು ಪೊಲೀಸ್ ಇಲಾಖೆಗಳಿಗೆ 4ಜಿ ವಿನಾಯಿತಿ ನೀಡಿ ಲಿಡ್ಕರ್ ನಿಗಮದಿಂದ ಸರಬರಾಜು ಮಾಡಲು ಕ್ರಮ ಕೈಗೊಳ್ಳಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.

15. ಮುಂಬೈ–ಕರ್ನಾಟಕದಲ್ಲಿ ತರಬೇತಿ ನೀಡುವ ಸಂಸ್ಥೆ ಒಂದೇ ಇರುವುದರಿಂದ ಆಸಕ್ತ ಮತ್ತು ಅರ್ಹ ವಿದ್ಯಾರ್ಥಿಗಳು ಅವಕಾಶ ವಂಚಿತರಾಗುವುದರಿಂದ ಆ ಭಾಗದಲ್ಲಿ ಮೊತ್ತೊಂದು ಸಂಸ್ಥೆಯನ್ನು ಪ್ರಾರಂಭಿಸಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.

16. ಪುಣೆಯಲ್ಲಿರುವಂತೆ ರಾಜ್ಯದಲ್ಲಿಯೂ ಸಹಾ ಪ್ರಸಕ್ತ ಸಾಲಿನಿಂದ ನೇರವಾಗಿ ಪರೀಕ್ಷೆ ಮುಖಾಂತರ ಪ್ರತಿ ವರ್ಷ ಹೆಚ್ಚು ಜನರನ್ನು ಆಯ್ಕೆ ಮಾಡಿ ಅವರಿಗೆ ಅಲ್ಲಿಯೇ ತರಬೇತಿ ನೀಡಿ, ಹೆಚ್ಚಿನ ಸಂಖ್ಯೆಯಲ್ಲಿ ಯುಪಿಎಸ್‌ಸಿ ಮತ್ತು ಕೆಪಿಎಸ್‌ಸಿ ಪರೀಕ್ಷೆಗಳಲ್ಲಿ ಉತ್ತೀರ್ಣರಾಗುವಂತೆ ಕ್ರಮ ಕೈಗೊಳ್ಳಲು ಸಮಿತಿಯು ಶಿಫಾರಸ್ಸು ಮಾಡುತ್ತದೆ.

17. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜನಾಂಗಗಳ ಕಲ್ಯಾಣಕ್ಕಾಗಿ ಅತ್ಯವಶ್ಯಕವಾಗಿರುವ ಅನುದಾನದ ಕುರಿತು ಇಲಾಖೆಯಿಂದ 10000 ಕೋಟಿಗಳಿಗೆ ಬೇಡಿಕೆ ಇಟ್ಟಿದ್ದರ ಪೈಕಿ ಕೇವಲ 4,500 ಕೋಟಿಗಳಿಗೆ ಮಾತ್ರ ರಾಜ್ಯ ಪರಿಷತ್ತಿನಲ್ಲಿ ಅನುಮೋದನೆ ನೀಡಿರುವುದರಿಂದ ಈ ಸಮುದಾಯಗಳ ಅಭಿವೃದ್ಧಿಯು ಕುಂಠಿತವಾಗುವುದಲ್ಲದೇ, ಯಾವುದೇ ಯೋಜನೆ/ಕಾರ್ಯಕ್ರಮಗಳು ಪೂರ್ಣವಾಗುವುದಿಲ್ಲವಾದ್ದರಿಂದ ಪ್ರಸಕ್ತ ಸಾಲಿನ ಆಯವ್ಯಯ ಗಾತ್ರದ ಅತಿ ಹೆಚ್ಚು ಅನುದಾನವನ್ನು ಮೀಸಲಿಟ್ಟು ಬಿಡುಗಡೆ ಮಾಡಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.

18. ಇಲಾಖೆಯಡಿ ಬರುವ ಎಲ್ಲಾ ನಿಗಮಗಳು ಅನುಷ್ಠಾನ ಮಾಡುತ್ತಿರುವ ಗಂಗಾ ಕಲ್ಯಾಣ ಯೋಜನೆಯ ಫಲಾನುಭವಿಗಳ ಆಯ್ಕೆಯಲ್ಲಿ ಬಾಕಿ ಇರುವ ಸುಮಾರು 17,700ಕ್ಕಿಂತ ಹೆಚ್ಚು ಪ್ರಕರಣಗಳ ಪೈಕಿ 8000 ಫಲಾನುಭವಿಗಳು ಮಾತ್ರ ಆಯ್ಕೆ ಮಾಡಿರುವುದರಿಂದ ಸರ್ಕಾರದ ಯೋಜನೆಗಳು ಈ ಬಡ

ಸಮುದಾಯಗಳಿಗೆ ಮುಟ್ಟುವುದಿಲ್ಲವಾದ್ದರಿಂದ ಕೂಡಲೇ ಉಳಿದ ಎಲ್ಲಾ ಫಲಾನುಭವಿಗಳ ಆಯ್ಕೆ ಮಾಡಲು ಅಗತ್ಯ ಕ್ರಮವಹಿಸಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.

19. ವಿವಿಧ ಇಲಾಖೆಗಳಡಿ ಮಂಜೂರಾಗುವ ಎಸ್‌ಸಿಎಸ್‌ಪಿ/ಟಿಎಸ್‌ಪಿ ಅನುದಾನವನ್ನು ಆ ಜನಾಂಗದ ಅಭಿವೃದ್ಧಿಗಾಗಿ ಬಳಸದಿರುವ ಕುರಿತು ಮತ್ತು ಇಲಾಖಾವಾರು ಆಗಿರುವ ಲೋಪದೋಷಗಳ ಕುರಿತು ಇಲ್ಲಿಯವರೆಗೆ ಅಧಿನಿಯಮದ ಪ್ರಕರಣ 24ರ ಪ್ರಕಾರ ಯಾರ ವಿರುದ್ಧವೂ ಕ್ರಮ ವಹಿಸಿಲ್ಲವಾದ್ದರಿಂದ ಕಾಯ್ದೆಯ ಪ್ರಕಾರ ತನಿಖೆ ನಡೆಸಿ, ತನಿಖಾ ವರದಿಯ ಪ್ರಕಾರ ಕ್ರಮ ವಹಿಸಲು ಸಮಿತಿಯು ಸೂಚಿಸುತ್ತದೆ.

20. ಎಸ್‌ಸಿಎಸ್‌ಪಿ/ಟಿಎಸ್‌ಪಿ ಅಧಿನಿಯಮದ ಪ್ರಕರಣ 7ಡಿ ಅಡಿಯಲ್ಲಿ ಈ ಅನುದಾನವನ್ನು ಇತರೆ ಜನಾಂಗಕ್ಕೂ ಉಪಯೋಗವಾಗುವ ಕಾಮಗಾರಿ/ಯೋಜನೆಗಳಿಗೆ ಖರ್ಚು ಮಾಡುತ್ತಿದ್ದ ಹಿನ್ನಲೆಯಲ್ಲಿ, ಈ 7ಡಿ ಪ್ರಕರಣವನ್ನು ತೆಗೆದುಹಾಕಿರುವುದಾಗಿ ಪ್ರಸಕ್ತ ಆಯವ್ಯಯದಲ್ಲಿ ಘೋಷಣೆ ಮಾಡಿರುವುದರಿಂದ ಪ್ರಸಕ್ತ ಸಾಲಿನಲ್ಲಿ ಎಸ್‌ಸಿಎಸ್‌ಪಿ/ಟಿಎಸ್‌ಪಿ ಅಡಿ ಮೀಸಲಿಟ್ಟಿರುವ ಅನುದಾನಕ್ಕೆ ಪೂರಕವಾಗಿ ಹೊಸ ಹೊಸ ಯೋಜನೆ/ಕಾರ್ಯಕ್ರಮಗಳನ್ನು ರೂಪಿಸಿಕೊಳ್ಳುವುದರ ಮುಖಾಂತರ ಬದಲಾವಣೆ ತರಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.

21. ಪಜಾ/ಪಪಂ ಜನಾಂಗ ಅಭಿವೃದ್ಧಿಯಾಗಬೇಕಾದರೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಪಬ್ಲಿಕ್ ಸೆಕ್ಟರ್‌ಗಳಲ್ಲಿ, ಕೆಎಂಎಫ್., ಡಿಸಿಸಿ ಬ್ಯಾಂಕ್‌ಗಳಲ್ಲಿ ಕಡ್ಡಾಯವಾಗಿ ಮೀಸಲಾತಿ ಅಳವಡಿಸಲು ಸಮಿತಿಯು ಶಿಫಾರಸ್ಸು ಮಾಡುತ್ತದೆ.

22. ಪಜಾ/ಪಪಂ ಜನಾಂಗದವರು ವಾಸವಿರುವ ಕಾಲೋನಿಗಳಲ್ಲಿ ಸರಿಯಾಗಿ ಚರಂಡಿ, ಬೀದಿ ದೀಪಗಳು ಇರುವುದಿಲ್ಲವಾದ್ದರಿಂದ ಜರೂರಾಗಿ ಅನುದಾನ ಬಿಡುಗಡೆ ಮಾಡಿ ಎಲ್ಲಾ ಅವಶ್ಯಕ ಮೂಲಭೂತ ಸೌಕರ್ಯಗಳನ್ನು ಒದಗಿಸಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.

23. ರಾಜ್ಯದ ಅನೇಕ ಗ್ರಾಮಗಳಲ್ಲಿರುವ ಪಜಾ/ಪಪಂ ಜನಾಂಗಕ್ಕೆ ಸ್ಮಶಾನಕ್ಕಾಗಿ ಸ್ಥಳ ಇಲ್ಲದಿರುವುದರಿಂದ ಕೂಡಲೇ ಎಲ್ಲಾ ಕಡೆಗಳಲ್ಲಿ ಸ್ಮಶಾನಕ್ಕಾಗಿ ಸ್ಥಳವನ್ನು ನಿಗದಿಗೊಳಿಸಲು ಆಯಾ ಜಿಲ್ಲಾಧಿಕಾರಿಗಳಿಗೆ ಸೂಚಿಸಲು ಸಮಿತಿಯು ಶಿಫಾರಸ್ಸು ಮಾಡುತ್ತದೆ.

24. ಭೂ ಒಡೆತನ ಯೋಜನೆಯಡಿ ಒಂದು ಎಕರೆಗೆ ನಿಗದಿಯಾಗಿರುವ ಮೊತ್ತದಲ್ಲಿ ಜಮೀನುಗಳು ಸಿಗದೇ ಈ ಯೋಜನೆ ಪರಿಣಾಮಕಾರಿಯಾಗಿ ಈ ಜನಾಂಗಕ್ಕೆ ಉಪಯೋಗ ಆಗುತ್ತಿಲ್ಲವಾದ್ದರಿಂದ ರಾಜ್ಯದ ಎಲ್ಲಾ ಜಿಲ್ಲೆಗಳಿಗೂ ಅನ್ವಯವಾಗುವಂತೆ ಈ ಮೊತ್ತವನ್ನು 25 ಲಕ್ಷಗಳಿಗೆ ಏರಿಸಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.

25. ಗಂಗಾ ಕಲ್ಯಾಣ ಯೋಜನೆಯಡಿ ನೀಡಲಾಗುತ್ತಿರುವ ಭೌತಿಕ ಗುರಿಗಳಿಗೆ ಅರ್ಜಿಗಳು ಬರುವುದಕ್ಕೆ ಹೋಲಿಸದರೆ ಶೇ. 5% ರಷ್ಟು ಇರುವುದಿಲ್ಲವಾದ್ದರಿಂದ ಭೌತಿಕ ಗುರಿಯನ್ನು ಹೆಚ್ಚಿಸಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.

26. ಪಜಾ/ಪಪಂ ಜನಾಂಗ ವಾಸವಿರುವ ಅನೇಕ ಕಾಲೋನಿಗಳಲ್ಲಿ ಈಗಲೂ ವಿದ್ಯುತ್ ಬಲ್ಬ್‌ಗಳಿದ್ದು, ಕಳಪೆ ಮಟ್ಟದ್ದಾಗಿರುವುದರಿಂದ ಜರೂರಾಗಿ ಎಲ್ಲಾ ಕಡೆಗಳಲ್ಲಿ ಹೈಮಾಸ್ಕ್ ಲೈಟ್‌ಗಳನ್ನು ಅಳವಡಿಸಬೇಕೆಂದು, ಆರ್.ಒ. ಪ್ಲಾಂಟ್‌ಗಳನ್ನು ಅಳವಡಿಸಬೇಕೆಂದು ಹಾಗೂ ಅಂಗನವಾಡಿಗಳಲ್ಲಿ ಉತ್ತಮ ಗುಣಮಟ್ಟದ ಆಹಾರವನ್ನು ನೀಡಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.

27. ಪಜಾ/ಪಪಂ ಜನಾಂಗದವರು ವಾಸಿಸುವ ಕಾಲೋನಿಗಳಲ್ಲಿ ಮನೆಗಳನ್ನು ಕಟ್ಟಿಕೊಂಡಿರುವವರಿಗೆ ಹಲವಾರು ವರ್ಷಗಳಿಂದ ಹಕ್ಕುಪತ್ರಗಳಿಲ್ಲದೇ ಅನೇಕ ಸೌಲಭ್ಯಗಳಿಂದ ವಂಚಿತರಾಗುತ್ತಿರುವುದರಿಂದ ಈ ಕಾಲೋನಿಗಳಲ್ಲಿರುವವರಿಗೆ ಕೂಡಲೇ ಹಕ್ಕುಪತ್ರಗಳನ್ನು ನೀಡಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.

28. ಮಲೆನಾಡು ಪ್ರದೇಶದಲ್ಲಿರುವ ಅನೇಕ ಪಜಾ/ಪಪಂ ಜನಾಂಗದವರು ಇವತ್ತಿಗೂ ಸಹಾ ಮನೆಗಳಲ್ಲಿ ವಿದ್ಯುತ್ ಸಂಪರ್ಕ ಇಲ್ಲದೇ ಸೀಮೆಎಣ್ಣೆ ದೀಪದಿಂದಲೇ ಜೀವನ ಸಾಗಿಸುತ್ತಿರುವುದರಿಂದ ಇಲಾಖೆಯ ಜಿಲ್ಲಾಮಟ್ಟದ ಮತ್ತು ತಾಲ್ಲೂಕು ಮಟ್ಟದ ಅಧಿಕಾರಿಗಳು ಅಂತಹ ಮನೆಗಳನ್ನು ಗುರುತಿಸಿ, ವಿದ್ಯುತ್ ಸಂಪರ್ಕ ಕಲ್ಪಿಸಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.

29. ಸುಮಾರು 25 ವರ್ಷಗಳಿಂದಲೂ ಒಂದೇ ರೀತಿಯ ಸಣ್ಣ-ಪುಟ್ಟ ಸಬ್ಸಿಡಿ ಯೋಜನೆಗಳಿಂದ ಈ ಜನಾಂಗ ಯಾವುದೇ ರೀತಿ ಪರಿಣಾಮಕಾರಿಯಾಗಿ ಅಭಿವೃದ್ಧಿ ಹೊಂದಿಲ್ಲದಿರುವುದರಿಂದ ಅಂತಹ ಯೋಜನೆಗಳನ್ನು ತೆಗೆದುಹಾಕಿ ಹೊಸ ಯೋಜನೆಗಳನ್ನು ರೂಪಿಸಿಕೊಳ್ಳಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.

30. ಭೂ ಒಡೆತನ ಯೋಜನೆಯಡಿ ಹಲವಾರು ಪ್ರಸ್ತಾವನೆಗಳು ಬಾಕಿ ಇದ್ದು, ಕೂಡಲೇ ಅವುಗಳನ್ನು ವಿಲೇ ಮಾಡುವುದರ ಜೊತೆಗೆ ಕೊಳವೆ ಬಾವಿಗಳನ್ನು ನೀಡಬೇಕೆಂದು ಮತ್ತು ಮನೆಗಳು ಇಲ್ಲದವರಿಗೆ ಮನೆಗಳನ್ನು ನೀಡುವುದರ ಮೂಲಕ ಒಂದು ಬಾರಿ ಶಾಶ್ವತವಾಗಿ ಸೌಲಭ್ಯ ನೀಡಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.

31. ಯಾದಗಿರಿ, ರಾಯಚೂರು ಜಿಲ್ಲೆಗಳನ್ನೊಳಗೊಂಡಂತೆ ಕೆಲವು ಹಾಡಿ ಹಟ್ಟಿಗಳಲ್ಲಿ ಪೌಷ್ಟಿಕ ಆಹಾರ ಇಲ್ಲದೇ ಮಕ್ಕಳು ಅಪೌಷ್ಟಿಕತೆಯಿಂದ ಬಳಲುತ್ತಿದ್ದು, ಅಂತಹ ಕಡೆಗಳಲ್ಲಿ ಗರ್ಭಿಣಿಯರು, ಹುಟ್ಟುವ ಮಕ್ಕಳಿಗೆ ವಿಶೇಷವಾಗಿ ಆಹಾರ ಕಿಟ್‌ಗಳನ್ನು ನೀಡಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.

32. ಪ್ರಸ್ತುತ ಇಲಾಖೆಯ ಹಾಸ್ಟೆಲ್‌ಗಳಲ್ಲಿ ಮಕ್ಕಳಿಗೆ ವಾರಕ್ಕೆ 2 ದಿನಗಳು ಮಾತ್ರ ಊಟದಲ್ಲಿ ಮೊಟ್ಟೆ ಕೊಡುತ್ತಿದ್ದು, ಕಲ್ಯಾಣ ಕರ್ನಾಟಕ ಭಾಗದಲ್ಲಿ ಮಕ್ಕಳು ಅಪೌಷ್ಟಿಕತೆಯಿಂದ ಬಳಲುತ್ತಿರುವ ಕಾರಣ ಈ ಭಾಗದಲ್ಲಿ ವಾರದ 5 ದಿನಗಳಲ್ಲಿ ಮಕ್ಕಳಿಗೆ ಮೊಟ್ಟೆಯನ್ನು ಕೊಡಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.

33. ಪ್ರಸ್ತುತ ಪಜಾ/ಪಪಂ ಕುಟುಂಬಗಳು ಹೆಚ್ಚಾಗಿದ್ದು, ಬಹಳಷ್ಟು ಕಡೆಗಳಲ್ಲಿ ವಾಸ ಮಾಡಲು ಮನೆಗಳು ಇರುವುದಿಲ್ಲವಾದ್ದರಿಂದ ಎಲ್ಲೆಲ್ಲಿ ಸರ್ಕಾರಿ ಭೂ ಲಭ್ಯವಿದೆಯೋ ಅಂತಹ ಕಡೆಗಳಲ್ಲಿ ಅಥವಾ ಸರ್ಕಾರಿ ಭೂಮಿ ಲಭ್ಯವಿಲ್ಲದಿದ್ದಲ್ಲಿ ಖಾಸಗಿ ಭೂಮಿ ಖರೀದಿಸಿ, ಮನೆಗಳನ್ನು ನಿರ್ಮಿಸಿ ಇವರಿಗೆ ನೀಡಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.

34. ರಾಜ್ಯದ ಎಲ್ಲಾ ಇಲಾಖೆಗಳು ಎಸ್‌ಸಿಎಸ್‌ಪಿ/ಟಿಎಸ್‌ಪಿ ಅನುದಾನದಡಿ ಕೈಗೊಳ್ಳುವ ಕಾಮಗಾರಿಗಳು ಹಾಗೂ ಫಲಾನುಭವಿಗಳ ಕುರಿತು ಸಮಾಜ ಕಲ್ಯಾಣ ಇಲಾಖೆಗೆ ಮಾಹಿತಿಯನ್ನು ಒದಗಿಸುವುದು ಸೂಕ್ತವೆಂದು ಸಮಿತಿಯು ಸೂಚಿಸುತ್ತದೆ ಹಾಗೂ ಈ ಕುರಿತು ಆರ್ಥಿಕ ಇಲಾಖೆಯು ಸುತ್ತೋಲೆ ಹೊರಡಿಸಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.

35. ಇಲಾಖೆಗಳು ಒದಗಿಸಿರುವ ಮಾಹಿತಿಯ ಪ್ರಕಾರ ಎಸ್‌ಸಿಎಸ್‌ಪಿ/ಟಿಎಸ್‌ಪಿ ಅಡಿಯಲ್ಲಿ ಮೀಸಲಿಟ್ಟ ಅನುದಾನವನ್ನು ಬಳಸದೇ ಮುಂದುವರೆಸಿಕೊಂಡು ಹೋಗುತ್ತಿರುವುದನ್ನು ಸಮಿತಿಯು ತೀವ್ರವಾಗಿ ಖಂಡಿಸಿ ಸಮಾಜ ಕಲ್ಯಾಣ ಇಲಾಖೆ ಮತ್ತು ಶಿಕ್ಷಣ ಇಲಾಖೆಯಲ್ಲಿ ಈ ವರ್ಗಗಳ ವಿದ್ಯಾರ್ಥಿಗಳಿಗೆ ಮತ್ತು ಜನಾಂಗದ ಅಭಿವೃದ್ಧಿಗಾಗಿ ಇರುವ ಸೌಲಭ್ಯಗಳನ್ನು ಒದಗಿಸಲು ಅನುದಾನದ ಕೊರತೆ ಇರುವುದರಿಂದ ವಿದ್ಯಾರ್ಥಿ ವೇತನ, ಹಾಸ್ಟೆಲ್‌ಗಳ ಮತ್ತು ವಸತಿ ಶಾಲೆಗಳ ಕಟ್ಟಡ, ಮೂಲಭೂತ ಸೌಲಭ್ಯಗಳು, ಅಗತ್ಯ ಸಿಬ್ಬಂದಿ, ಕಂಪ್ಯೂಟರ್‌ಗಳನ್ನೊಳಗೊಂಡಂತೆ ಶಿಕ್ಷಣಕ್ಕಾಗಿ ಈ ಜನಾಂಗಕ್ಕೆ ಅಗತ್ಯವಿರುವ ಸವಲತ್ತುಗಳನ್ನು ಮತ್ತು ಶಿಕ್ಷಣ ಇಲಾಖೆಗೆ ಅಗತ್ಯವಿರುವ ಅನುದಾನವನ್ನು ಬಳಕೆ ಮಾಡದ ಇಲಾಖೆಗಳಿಂದ ಎಸ್‌ಸಿಎಸ್‌ಪಿ/ಟಿಎಸ್‌ಪಿ ಅನುದಾನವನ್ನು ಹಿಂಪಡೆದು ಸಮಾಜ ಕಲ್ಯಾಣ ಮತ್ತು ಶಿಕ್ಷಣ ಇಲಾಖೆಗಳಿಗೆ ನೀಡಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.

36. ಎಲ್ಲಾ ನಿಗಮಗಳಲ್ಲಿ ಒಂದೇ ರೀತಿಯ ಯೋಜನೆಗಳಿರುವುದರಿಂದ ಹಳೆಯ ಯೋಜನೆಗಳನ್ನು ರದ್ದುಪಡಿಸಿ, ಈಗಿರುವ ಕಾಲಕ್ಕೆ ತಕ್ಕಂತೆ 2011ರ ಜನಗಣತಿ ಪ್ರಕಾರ ನಿಗಮಗಳಲ್ಲಿರುವ ಆಯಾ ಜಾತಿಗಳ ಜನಸಂಖ್ಯೆಗೆ ತಕ್ಕಂತೆ ಮತ್ತು ಆಯಾ ವಿಧಾನಸಭಾ ಕ್ಷೇತ್ರಗಳ ಬೇಡಿಕೆಗೆ ತಕ್ಕಂತೆ ಹೊಸ ಹೊಸ ಯೋಜನೆಗಳನ್ನು ರೂಪಿಸಿಕೊಳ್ಳಬೇಕೆಂದು ಹಾಗೂ ಪ್ರತಿಯೊಂದು ನಿಗಮಗಳಿಗೆ ಕನಿಷ್ಠ ರೂ.

250–300 ಕೋಟಿಗಳ ಅನುದಾನವನ್ನು ಬಿಡುಗಡೆ ಮಾಡಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.

37. ಒಂದು ವರ್ಷದಲ್ಲಿ ಆನ್‌ಲೈನ್ ಮುಖಾಂತರ ಒಬ್ಬ ಅರ್ಜಿದಾರರು ಅರ್ಜಿ ಸಲ್ಲಿಸಿ ಫಲಾನುಭವಿಯಾಗಿ ಮುಂದಿನ ವರ್ಷದಲ್ಲಿ ಮತ್ತೆ ಅರ್ಜಿ ಸಲ್ಲಿಸಲು ಅವಕಾಶ ಇಲ್ಲದಿರುವ ರೀತಿಯಲ್ಲಿ ಇಲಾಖೆಯ ಎಲ್ಲಾ ನಿಗಮಗಳಲ್ಲಿ ಕ್ರಮ ವಹಿಸಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.

38. ಎಸ್‌ಸಿಎಸ್‌ಪಿ/ಟಿಎಸ್‌ಪಿ ಅಧಿನಿಯಮ, 2013ರ ಪ್ರಕರಣ 7ಡಿ ಅಡಿಯಲ್ಲಿ ಈ ಅನುದಾನವನ್ನು ಇತರೆ ಯೋಜನೆಗಳಿಗೆ ಬಳಸುತ್ತಿದ್ದದ್ದನ್ನು ಗಮನಿಸಿದ ನಂತರ ಈ ಪ್ರಕರಣವನ್ನು ತೆಗೆದುಹಾಕಲಾಗಿದೆ ಎಂದು ಈ ಸಾಲಿನ ಆಯವ್ಯಯದಲ್ಲಿ ಘೋಷಿಸಲಾಗಿದೆ. ಆದರೆ, ಪ್ರಕರಣ 7ಬಿ ಮತ್ತು 7ಸಿ ಗಳಲ್ಲಿಯೂ ಸಹಾ ಇದೇ ರೀತಿಯಾಗದಂತೆ ಸೂಕ್ತ ನಿಯಮಗಳನ್ನು ರೂಪಿಸಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.

39. ಎಲ್ಲಾ ಇಲಾಖೆಗಳಲ್ಲಿ ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿ ಮಾಡದೇ, ಹೊರಗುತ್ತಿಗೆಯಲ್ಲಿ ಪಡೆಯುತ್ತಿರುವುದರಿಂದ ಪಜಾ/ಪಪಂ ಜನಾಂಗಕ್ಕೆ ತುಂಬಾ ಅನ್ಯಾಯವಾಗುತ್ತಿದ್ದು, ಹೊರಗುತ್ತಿಗೆ ಏಜೆನ್ಸಿಯವರು ಸ್ಥಳೀಯ ಪಜಾ/ಪಪಂ ಅಭ್ಯರ್ಥಿಗಳಿಂದ ಭರ್ತಿ ಮಾಡಿಕೊಳ್ಳಲು ಪ್ರತ್ಯೇಕ ಕಾಯ್ದೆ ಹಾಗೂ ನಿಯಮಗಳನ್ನು ರೂಪಿಸಿಕೊಳ್ಳಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.

40. ಕೇಂದ್ರ ಸರ್ಕಾರದ ಎನ್‌ಎಸ್‌ಐಸಿ ನೋಂದಣಿಯಾದ ಪಜಾ/ಪಪಂ ಜನಾಂಗದ ಗುತ್ತಿಗೆದಾರರಿಗೆ ಟೆಂಡರ್ ಕರೆದಾಗ ಕೇಂದ್ರ ಸರ್ಕಾರ ಇಎಂಡಿ ರಿಯಾಯ್ತಿ ನೀಡುತ್ತಿರುವ ರೀತ್ಯಾ, ಅದೇ ರೀತಿ ಈ ಜನಾಂಗದ ಅಭಿವೃದ್ಧಿಗಾಗಿ ರಾಜ್ಯ ಸರ್ಕಾರದ ಕೆಟಿಪಿಪಿ ಕಾಯ್ದೆಯಲ್ಲಿ ಮೀಸಲಾತಿ ಅಳವಡಿಸಿಕೊಳ್ಳಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.

41. ಸಮಾಜ ಕಲ್ಯಾಣ ಇಲಾಖೆಯಿಂದ ನಡೆಸಲ್ಪಡುತ್ತಿರುವ ವಿಶೇಷ ಶಾಲೆಗಳು, ವಸತಿ ಶಾಲೆಗಳು, ಹಾಸ್ಟೆಲ್‌ಗಳು, ವಸತಿ, ಊಟ ಮತ್ತು ಸಿಬ್ಬಂದಿಗಳಿಗೆ ಸಂಬಂಧಿಸಿದಂತೆ ಅನುದಾನ ಸದ್ಬಳಕೆ ಅನುಕೂಲಕ್ಕಾಗಿ ಆರ್ಥಿಕ ಇಲಾಖೆಯು ಎಸ್‌ಸಿಎಸ್‌ಪಿ/ಟಿಎಸ್‌ಪಿ ಅನುದಾನವನ್ನು ವರ್ಷಾವಾರು ಮಾಹಿತಿ ಆಧಾರದ ಮೇರೆಗೆ ಪರಿಗಣಿಸಲು ಸಮಿತಿಯು ಶಿಫಾರಸ್ಸು ಮಾಡುತ್ತದೆ.

42. ಮಲೆನಾಡು ಮತ್ತು ಕರಾವಳಿ ಭಾಗದ ಜಿಲ್ಲೆಗಳನ್ನೊಳಗೊಂಡಂತೆ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ವಾಸಿಸುವ ಬುಡಕಟ್ಟು ಜನಾಂಗಕ್ಕೆ ಅರಣ್ಯ ಹಕ್ಕು ಕಾಯ್ದೆ, 2006ರ ಅನ್ವಯ ಸಿಗಬೇಕಾದ ಹಕ್ಕುಪತ್ರಗಳು ಈವರೆಗೂ ಸಿಕ್ಕಿಲ್ಲದಿರುವುದರಿಂದ ಕೂಡಲೇ ಹಕ್ಕುಪತ್ರಗಳನ್ನು ನೀಡಲು ಕ್ರಮ ಕೈಗೊಳ್ಳಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.

43. ರಾಜ್ಯದಲ್ಲಿ ಬುಡಕಟ್ಟು ಜನಾಂಗ ವಾಸಿಸುತ್ತಿರುವ ಹಾಡಿ–ಹಟ್ಟಿಗಳಲ್ಲಿ ಅಥವಾ ಗ್ರಾಮಗಳಲ್ಲಿ ಅತ್ಯವಶ್ಯವಿರುವ ಮೂಲಭೂತ ಸೌಕರ್ಯಗಳಾದ ವಸತಿ, ರಸ್ತೆ, ಕುಡಿಯುವ ನೀರು, ವಿದ್ಯುತ್, ವೈದ್ಯಕೀಯ ಚಿಕಿತ್ಸೆ ವ್ಯವಸ್ಥೆ, ಸ್ವ ಉದ್ಯೋಗ, ಶಿಕ್ಷಣ ಮುಂತಾದವುಗಳನ್ನು ಜರೂರಾಗಿ ಒದಗಿಸಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.

## ನಾಗರೀಕ ಹಕ್ಕು ಜಾರಿ ನಿರ್ದೇಶನಾಲಯ (ಡಿಸಿಆರ್‌ಇ):

ಭಾರತ ಸಂವಿಧಾನದ ಕಲಂ 17 ರೀತ್ಯ ವಿಶೇಷವಾದ ಈ ಘಟಕವು ಇಡೀ ರಾಜ್ಯ ವ್ಯಾಪ್ತಿ ಇದ್ದು, ಒಟ್ಟು 7 ಜನ ಎಸ್.ಪಿ.ಗಳು ಕಾರ್ಯ ನಿರ್ವಹಿಸುತ್ತಿದ್ದಾರೆ. 5–6 ಜಿಲ್ಲೆಗಳಿಗೆ ಒಬ್ಬರಂತೆ ಐಜಿಪಿ ಇರುತ್ತಾರೆ. ಇದನ್ನು ವಲಯ ಕೇಂದ್ರ ಸ್ಥಾನವೆಂದು ಕರೆಯಲಾಗುತ್ತದೆ. ಇವರ ಅಧೀನದಲ್ಲಿ ಡಿಎಸ್‌ಪಿ. ಮತ್ತು ಇನ್ಸ್‌ಪೆಕ್ಟರ್‌ಗಳು ಇದ್ದು, ಇಡೀ ರಾಜ್ಯದಲ್ಲಿ 283 ಮಂಜೂರಾತಿ ಹುದ್ದೆಗಳಿರುತ್ತವೆ. ನಮ್ಮ ಅಧಿಕಾರವನ್ನು ಚಲಾಯಿಸುವ ಸಂದರ್ಭದಲ್ಲಿ ಕೆಲವು ಸವಾಲುಗಳು ಬರುತ್ತಿದ್ದು, ಅವುಗಳನ್ನು ಮೀರಿ ಕಾರ್ಯನಿರ್ವಹಿಸುತ್ತಿದ್ದೇವೆ. ಯಾವುದೇ ರೀತಿಯಲ್ಲಿ ಅಸ್ಪೃಶ್ಯತೆ ಆಚರಣೆಯನ್ನು ನಿಷೇದಿಸಿ, ಅದನ್ನು ನಿರ್ಮೂಲನೆ ಮಾಡುವುದು ಪ್ರಮುಖ ಉದ್ದೇಶವಾಗಿರುತ್ತದೆ.

**ನಿರ್ದೇಶನಾಲಯದ ಪ್ರಮುಖ ಕರ್ತವ್ಯಗಳು :**

- ಪಜಾ/ಪಪಂ. ಜನಾಂಗಕ್ಕೆ ಉದ್ಯೋಗದಲ್ಲಿ ಮೀಸಲಾತಿ ಕಲ್ಪಿಸುವಲ್ಲಿ ಉಲ್ಲಂಘನೆಯಾದರೆ ತನಿಖೆ ನಡೆಸಿ, ಕೈಗೊಳ್ಳಬಹುದಾದ ಕ್ರಮಗಳೊಂದಿಗೆ ಆಯಾ ಇಲಾಖೆಗೆ ವರದಿ ಸಲ್ಲಿಸುವುದು
- ಕರ್ನಾಟಕ ಭೂ ಮಂಜೂರಾತಿ ನಿಯಮಗಳ ಪ್ರಕಾರ ಹೆಚ್ಚುವರಿ ಜಮೀನು ಮತ್ತು ಗೋಮಾಳ ಜಮೀನು ಶೇ. 50% ರಷ್ಟು ಮೀಸಲಾತಿ ಉಲ್ಲಂಘನೆಯಾದಲ್ಲಿ ತನಿಖೆ ನಡೆಸಿ ವರದಿ ಸಲ್ಲಿಸುವುದು.
- ನಿವೇಶನಗಳ ಹಂಚಿಕೆಯಲ್ಲಿ ಮೀಸಲಾತಿ ಉಲ್ಲಂಘನೆಯಾದಲ್ಲಿ ತನಿಖೆ ನಡೆಸಬಹುದು
- ಪಜಾ/ಪಪಂ ಜನಾಂಗದ ಜಮೀನುಗಳನ್ನು ಇತರೆ ಸಮುದಾಯದವರು ನಿಯಮಗಳನ್ನು ಉಲ್ಲಂಘಿಸಿ ಆಕ್ರಮಿಸಿಕೊಂಡಲ್ಲಿ ತೆರವುಗೊಳಿಸುವುದು.
- ಈ ಸಮುದಾಯಗಳಿಗೆ ನೀಡುವ ಸವಲತ್ತುಗಳನ್ನು ಇತರರು ಸುಳ್ಳು ಜಾತಿ ಪ್ರಮಾಣ ಪತ್ರ ಪಡೆದುಕೊಳ್ಳುವ ಪ್ರಕರಣಗಳು.

❖ ಜೀತ ಪದ್ಧತಿ ನಿರ್ಮೂಲನೆ ಸಂಬಂಧವಾಗಿ ವಿಚಾರಣೆ ನಡೆಸುವುದು.

❖ ವಿದ್ಯಾರ್ಥಿ ನಿಲಯಗಳಲ್ಲಿ ಸೌಲಭ್ಯಗಳನ್ನು ಒದಗಿಸದೇ ಉಲ್ಲಂಘನೆ ಮಾಡುವುದು.

❖ ಪಜಾ/ಪಪಂ ಜನಾಂಗದವರ ರಕ್ಷಣೆಗೆ ಸಂಬಂಧಿಸಿದಂತೆ ಯಾವುದೇ ಕಾನೂನು ಉಲ್ಲಂಘನೆಯಾದಲ್ಲಿ ವಿಚಾರಣೆ ನಡೆಸಿ, ಕ್ರಮಗಳ ಶಿಫಾರಸ್ಸಿನೊಂದಿಗೆ ವರದಿ ಸಲ್ಲಿಸುವುದು ಎಂದು ಇಲಾಖಾಧಿಕಾರಿಗಳು ಸಮಿತಿಗೆ ಸಂಕ್ಷಿಪ್ತವಾಗಿ ವಿವರಿಸಿದರು.

ಹಲವಾರು ಕಡೆಗಳಲ್ಲಿ ಪಜಾ/ಪಪಂ ಜನಾಂಗಕ್ಕೆ ಸೇರದವರು ಸುಳ್ಳು ಜಾತಿ ಪ್ರಮಾಣ ಪಡೆದು ಉದ್ಯೋಗ ಮೀಸಲಾತಿ ಅಲ್ಲದೇ, ಎಲ್ಲಾ ರೀತಿಯ ಸೌಲಭ್ಯಗಳನ್ನು ಪಡೆದುಕೊಳ್ಳುತ್ತಿದ್ದಾರೆ. ಇದರಿಂದ ಅರ್ಹರು ಅವಕಾಶ ವಂಚಿತರಾಗುತ್ತಿದ್ದಾರೆ. ಕೆಲವು ಭಾಗಗಳಲ್ಲಿ ಕಂದಾಯ ಅಧಿಕಾರಿ/ನೌಕರರು ಸರಿಯಾಗಿ ಸಮೀಕ್ಷೆ ಮಾಡದೇ ನೀಡುವ ವರದಿಯಿಂದಾಗಿ ಸುಳ್ಳು ಜಾತಿ ಪ್ರಮಾಣ ಹೆಚ್ಚಾಗಿದ್ದು, ಸರಿಯಾದ ಕ್ರಮವಾಗದಿರುವ ಕುರಿತು ಸಮಿತಿಯು ಇಲಾಖಾಧಿಕಾರಿಗಳಿಂದ ವಿವರಣೆ ಬಯಸಿತು.

**ಸುಳ್ಳು ಜಾತಿ ಪ್ರಮಾಣ ಪತ್ರ ಪಡೆಯುವ ಇತರೆ ಕೆಲವು ಜಾತಿಗಳು ಈ ಕೆಳಕಂಡಂತೆ ಇರುತ್ತವೆ.**

1. ಕುರುಬ(ಪ್ರವರ್ಗ–2ಎ) ಗೊಂಡ್, ರಾಜಗೊಂಡ್, ಕಾಡುಕುರುಬ, ಜೇನುಕುರುಬ(ಎಸ್‌ಟಿ)
2. ಕಣಿಯರ್ (ಪ್ರವರ್ಗ–2ಎ) ಕಣಿಯನ್(ಕೊಳ್ಳೇಗಾಲ)(ಎಸ್‌ಟಿ)
3. ಬ್ರಾಹ್ಮಣರು, ಮಾಲೇರು : ಜಾತಿ ಪಟ್ಟಿಯಲ್ಲಿರುವುದಿಲ್ಲ. –ಮಲೇರು(ಎಸ್‌ಟಿ)
4. ಬಣಜಿಗರು (ಪ್ರವರ್ಗ–3ಎ) : ಸೋಲಿಗ (ಎಸ್‌ಟಿ)
5. ಬೆಸ್ತ ಪರಿವಾರ, ರಾಜಪರಿವಾರ, ಗಂಗಾಮತ, ಗಂಗೆಮಕ್ಕಳು, ಗಂಗೆಕುಲ (ಪ್ರವರ್ಗ–1)
6. ನಾಯಕ(ಎಸ್‌ಟಿ)
7. **ಮೊದಲಿಯಾರ್**: ತಮಿಳುನಾಡು & ಆಂಧ್ರಪ್ರದೇಶ: ಆದಿ ದ್ರಾವಿಡ(ಎಸ್‌ಸಿ)
8. **ಕೋಟೆಯಾರ** (ಪ್ರವರ್ಗ–2) :**ಕೋಟೆಗಾರ್**(ಎಸ್‌ಸಿ)
9. ದೊಂಬಿದಾಸ (ಪ್ರವರ್ಗ–1) ಬೆಸ್ತ ಭೋಯಿ (ಪ್ರವರ್ಗ–1)
10. ಅಘಮುಡಿ (ಪ್ರವರ್ಗ–1) ಬೆಸ್ತ ಬೋಯಿ(ಪ್ರವರ್ಗ–1)
11. ರಾಜಭೋಯಿ (ಪ್ರವರ್ಗ–1) ತಮಿಳುನಾಡಿನ ಬೋಯರ್: ಭೋವಿ(ಎಸ್‌ಸಿ)
12. ವೀರಶೈವ – ಲಿಂಗಾಯತ (ಪ್ರವರ್ಗ–3ಬಿ) ಬೇಡಜಂಗಮ(ಎಸ್‌ಸಿ)

ಕಾಯ್ದೆಯ ಪ್ರಕರಣ 7ರ ರೀತ್ಯಾ ನಿರ್ದೇಶನಾಲಯದಿಂದ 100% ವಿಚಾರಣೆ ಮಾಡಲು ಸ್ಪಷ್ಟವಾದ ನಿರ್ದೇಶನಗಳು ಇರುತ್ತವೆ. 14 ಅಂಶಗಳ ರೀತ್ಯಾ ವಿಚಾರಣೆಗಳನ್ನು ನಿರ್ವಹಿಸಲಾಗುತ್ತಿದೆ.

ಆದಾದ ನಂತರ ಆಯಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು ಕ್ರಮವಹಿಸಬೇಕಾಗುತ್ತದೆ. ಬಹಳಷ್ಟು ಪ್ರಕರಣಗಳಲ್ಲಿ ಅಪೀಲು ಹೋಗುತ್ತಿದ್ದು, ನಂತರ ಕೇಸ್ ಮಾಡುವುದಕ್ಕೆ ನಿರ್ದೇಶನಾಲಯಕ್ಕೆ ಅಧಿಕಾರ ಇರುವುದಿಲ್ಲ. ನಿರ್ದೇಶನಾಲಯದ ಶಿಫಾರಸ್ಸಿನ ಆಧಾರದ ಮೇಲೆ ಆಯಾ ಜಿಲ್ಲಾಧಿಕಾರಿಗಳು ಆಸಿಂಧು ಮಾಡಿದಾಗ ಮಾತ್ರ ಅಂತಹವರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲು ಮಾಡುವುದು ಅಥವಾ ಕ್ರಮ ವಹಿಸಬಹುದಾಗಿರುತ್ತದೆ. ಈ ಹಿಂದೆ ಯಾರು ನಕಲಿ ಜಾತಿ ಪ್ರಮಾಣ ಪತ್ರ ಪಡೆಯುತ್ತಿದ್ದರೋ ಅವರ ವಿರುದ್ಧ ಮಾತ್ರ ಕ್ರಿಮಿನಲ್ ಮೊಕದ್ದಮೆ ದಾಖಲಾಗುತ್ತಿತ್ತು. ಆದರೆ ಈಗ ಯಾರು ನೀಡುತ್ತಾರೋ ಅವರ ವಿರುದ್ಧವೂ ಸಹಾ ಎಫ್‌ಐಆರ್ ದಾಖಲು ಮಾಡಲಾಗತ್ತಿದೆ. ಇಲ್ಲಿಯವರೆಗೆ ರಾಜ್ಯದಲ್ಲಿ 175 ತಹಶೀಲ್ದಾರ್ ವಿರುದ್ಧ ಎಫ್‌ಐಆರ್ ಮಾಡಲಾಗಿದೆ ಎಂದು ಇಲಾಖಾಧಿಕಾರಿಗಳು ಸಮಿತಿಗೆ ವಿವರಿಸಿದರು.

**ಪರಿಶೀಲನಾಂಶಗಳು :**

- ನಾಗರೀಕ ಹಕ್ಕು ಜಾರಿ ನಿರ್ದೇಶನಾಲಯಕ್ಕೆ ವಿಚಾರಣೆ ನಡೆಸಿ, ಶಿಫಾರಸ್ಸುಗಳೊಂದಿಗೆ ವರದಿಯನ್ನು ಸಲ್ಲಿಸಬಹುದಾಗಿದ್ದು, ಕ್ರಮ ಕೈಗೊಳ್ಳುವ ಅಥವಾ ತೀರ್ಮಾನ ಕೈಗೊಳ್ಳುವ ಅಧಿಕಾರ ಇರುವುದಿಲ್ಲದಿರುವುದು.
- ರಾಜ್ಯದಲ್ಲಿ ಇಂದಿಗೂ ಹಲವಾರು ಕಡೆಗಳಲ್ಲಿ ಅಸ್ಪೃಶ್ಯತೆಯು ಪೂರ್ತಿಯಾಗಿ ನಿರ್ಮೂಲನೆ ಆಗದಿರುವುದು.